ಬೆಲೆ ರೂ.2.50 WPP No. SK/MNG/WPP/69
D.O.P - 15th of every month from Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.
Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಜುಲೈ 2013

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-13 ಸಂಚಿಕೆ-7 ಪುಟಗಳು-8 Registered Under No.J/UDP/1260/2012-2014 Dated from 01-01-2012 to 31-12-2014.

## ಮೂರು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದ ಸ್ಥಾನಿಕ ಬ್ರಾಹ್ಮಣ ಸಭಾ (ರಿ), ಪಡುಬಿದ್ರಿ

ಸ್ಥಾನಿಕ ಬ್ರಾಹ್ಮಣ ಸಭಾ (ರಿ), ಪಡುಬಿದ್ರಿ. ಇದರ ವಾರ್ಷಿಕ ಮಹಾಸಭೆಯು ದಿನಾಂಕ.16-06-2013ನೇ ರವಿವಾರ ಎರ್ಮಾಳಿನ ಶ್ರೀ ರಾಜರಾಜೇಶ್ವರಿ ಸಭಾಭವನದಲ್ಲಿ ನಡೆಯಿತು. ಬೆಳಗ್ಗಿನ ಉಪಾಹಾರದ ಬಳಿಕ ಗಂಟೆ 9.00ರಿಂದ ಸಂಘದ ಪುಟಾಣಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಸುಮಾರು 13 ತಂಡದ ಪ್ರತಿಭೆಗಳು ತಮ್ಮ ನೃತ್ಯ ವೈಭವದ ಮೂಲಕ ಸಭಿಕರನ್ನು ರಂಜಿಸಿದರು.

11 ಗಂಟೆಯಿಂದ ಸಂಘದ ಅಧ್ಯಕ್ಷರಾದ ಶ್ರೀ ಎಮ್.ಕೆ.ಮೋಹನ್ ರಾವ್ ಇವರ ಅಧ್ಯಕ್ಷತೆಯಲ್ಲಿ ಸಂಘದ ಮಹಾಸಭೆಯು ಪ್ರಾರಂಭಗೊಂಡಿತು. ಸಂಘದ ಕಾರ್ಯದರ್ಶಿ ಶ್ರೀ ಸುಧಾಕರ ಬೆಳ್ಳೆ ಈ ಮೂರು ವರ್ಷಗಳಲ್ಲಿ ಸಂಘವು ಬೆಳೆದು ಬಂದ ಬಗ್ಗೆ ಸವಿಸ್ತಾರವಾದ ವರದಿಯನ್ನು ನೀಡಿದರು. ಹಾಗೆಯೇ ಉಡುಪಿ ಸಂಘದ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರರಾಯರ ನೇತೃತ್ವದಲ್ಲಿ ಚುನಾವಣಾ ಸಮಿತಿಯಲ್ಲಿ ಸದ್ರಿ ವರ್ಷಕ್ಕೆ ನೂತನ 26 ನಿರ್ದೇಶಕರನ್ನು ಆರಿಸಲಾಯಿತು.



12 ಗಂಟೆಗೆ ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎಮ್.ಕೆ. ಮೋಹನ್ ರಾವ್ ವಹಿಸಿದ್ದರು. ಉಡುಪಿ ಕುಂಜಿಬೆಟ್ಟು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರ ರಾವ್, ಬಪ್ಪನಾಡು ಶಿವಸುಬ್ರಹ್ಮಣ್ಯ ಸಭಾ ಕಾರ್ಯದರ್ಶಿ ಡಾ। ಬಿ.ಎಚ್.ರಾಘವರಾವ್, ಹೆಜಮಾಡಿಯ ಶ್ರೀ ವಸಂತ ಕುಮಾರ್, ಸಂಘದ ಗೌರವಾಧ್ಯಕ್ಷರಾದ ಶ್ರೀ ಪಿ.ಬಿ. ವಾಸುದೇವ ರಾವ್ ಇವರು ಮುಖ್ಯ ಅತಿಥಿಗಳಾಗಿದ್ದರು. ಸಭೆಯಲ್ಲಿ ಉಪಸ್ಥಿತರಿದ್ದ ಮೂಡಬಿದ್ರಿ ಸಂಘದ ಅಧ್ಯಕ್ಷರಾದ ಶ್ರೀ ದೇವಾನಂದ ಭಟ್, ಬೆಳುವಾಯಿ ಇವರನ್ನು ವೇದಿಕೆಗೆ ಆಹ್ವಾನಿಸಲಾಯಿತು. ಶ್ರೀ ಸುಧಾಕರ ಬೆಳ್ಳೆಯವರು ಎಲ್ಲರನ್ನೂ ಸ್ವಾಗತಿಸಿದರು.

ನಿವೃತ್ತ ಉಪನ್ಯಾಸಕರು, ಕೃಷಿಕರು, ಯಕ್ಷಗಾನ ಅರ್ಥಗಾರಿಕೆಯ ನಿಪುಣರು, ಆಧ್ಯಾತ್ಮಿಕ ಚಿಂತಕರು ಅಲ್ಲದೆ ಸಮಾಜದ ಹಲವು ದೇವಳಗಳಲ್ಲಿ ವೈದಿಕ ಶಿಬಿರಗಳನ್ನು ನಡೆಸಿದ ಶ್ರೀ ಸಾಂತೂರು ಸದಾಶಿವ ರಾವ್ ಇವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ಸನ್ಮಾನಿತರು ಸಂಘವು ಈ ಪಡುಬಿದ್ರಿ ವ್ಯಾಪ್ತಿಯಲ್ಲಿರುವ, ನಮ್ಮವರ ಆಡಳಿತಕ್ಕೆ ಒಳಪಟ್ಟ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುವುದನ್ನು ಶ್ಲಾಘಿಸಿದರು. ಮುಂದೆಯೂ ನಮ್ಮ ಬ್ರಾಹ್ಮಣತ್ವವನ್ನು ರಕ್ಷಿಸುವ ಕಾರ್ಯಗಳನ್ನು ನಡೆಸುವಂತೆ ಹಾರೈಸಿದರು. ಸಂಘದ ವ್ಯಾಪ್ತಿಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಗರಿಷ್ಟ ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿನಿ ಕುಂಜೂರಿನ ಕುಮಾರಿ ಜ್ಯೋತ್ಸ್ನಾ, ಪಿ.ಯು.ಸಿ.ಯ ಪ್ರತಿಭಾನ್ವಿತರಾದ ಪಡುಬಿದ್ರಿಯ ಅಜಯ್.ಎಸ್.ರಾವ್, ಕು.ಅಕ್ಷತಾ.ಎಸ್. ರಾವ್ ಹಾಗೂ ನಂದಳಿಕೆಯ ಕು.ಲಾವಣ್ಯ ಇವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಅಲ್ಲದೆ ಸಂಘದ ಮೂಲ ಉದ್ದೇಶದಂತೆ ವರ್ಷಂಪ್ರತಿ ವಿದ್ಯಾರ್ಥಿಗಳಿಗೆ ನೀಡುವ ಪ್ರೋತ್ಸಾಹಧನ ಸುಮಾರು 18 ವಿದ್ಯಾರ್ಥಿಗಳಿಗೆ ರೂ.1,05,000/– ಮೊತ್ತವನ್ನು ದಾನಿಗಳ ನೆರವಿನಿಂದ ನೀಡಲಾಯಿತು. ಅಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನೃತ್ಯ ಪ್ರದರ್ಶನವನ್ನು ನೀಡಿದ ಅತಿಥಿ ಕಲಾವಿದೆಯರಾದ ಕಾರ್ಕಳದ ಕುಮಾರಿ ಶೃತಿ ಭವಾನಿಶಂಕರ ರಾವ್ ಹಾಗೂ ಮೂಡುಬಿದ್ರೆಯ ಕುಮಾರಿ ಶುಭಾಂಜನ

(7ನೇ ಪುಟಕ್ಕೆ....)

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿ
**ಮಹಿಳಾ ವೇದಿಕೆ**

### ವರಮಹಾಲಕ್ಷ್ಮೀ ವ್ರತ

ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ವರಮಹಾಲಕ್ಷ್ಮೀವ್ರತ ಆಚರಣೆಯು ತಾ.16-08-2013ರಂದು ಶುಕ್ರವಾರ ಸಾಯಂಕಾಲ ಗಂಟೆ 4-30ಕ್ಕೆ ನೆರವೇರಲಿದೆ. ಭಾಗವಹಿಸುವ ಭಕ್ತ ಬಾಂಧವರು ಫಲಪುಷ್ಪ, ತುಳಸಿ, ವೀಳ್ಯ, ಕುಂಕುಮ, ಅರಸಿನ, ಸಣ್ಣ ಕಾಲುದೀಪ ಮೊದಲಾದ ಸಾಮಾಗ್ರಿಗಳೊಂದಿಗೆ (ಸಾಧ್ಯವಿದ್ದವರು ಮಧ್ಯಾಹ್ನ ಉಪವಾಸವಿದ್ದು) ಸಮಯಕ್ಕೆ ಸರಿಯಾಗಿ ಶ್ರೀ ಶಾರದಾ ಮಂಟಪಕ್ಕೆ ಆಗಮಿಸಿ, ಸಹಕರಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿ.

ಶ್ರೀ ದೇವಸ್ಥಾನದಲ್ಲಿ ತಾ.13-09-2013ರಂದು ಸಾಮೂಹಿಕ ಹೂವಿನ ಪೂಜಾ ಕಾರ್ಯಕ್ರಮವು ನಡೆಯಲಿರುವುದು.

– ಅಧ್ಯಕ್ಷರು ಮತ್ತು ಸಂಚಾಲಕರು

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿ
ಸಂಘದ ಆಶ್ರಯದಲ್ಲಿ

### ಸೌರ ಋಗುಪಾಕರ್ಮವು

**ತಾ.20-08-2013ರಂದು ಮಂಗಳವಾರ ಶ್ರೀ ಶಾರದಾ ಮಂಟಪದಲ್ಲಿ ನಡೆಯಲಿದ್ದು ಬೆಳಿಗ್ಗೆ 9-30ರಿಂದ ಕಾರ್ಯಕ್ರಮವು ಪ್ರಾರಂಭವಾಗಲಿದೆ.**

*ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಭಾಗವಹಿಸುವವರು ಹೂ, ತುಳಸಿ, ಹರಿವಾಣ, ಕೌಳಿಗೆಸೌಟನ್ನು ತರಬೇಕಾಗಿ ವಿನಂತಿ.*

– ಕಾರ್ಯದರ್ಶಿ


ಶ್ರೀ ಬಾಬಾರಾಮ್‌ದೇವ್‌ಜೀ

ಸ್ವಸ್ಥ ಭಾರತ

**ಪತಂಜಲಿ ಆರೋಗ್ಯ ಕೇಂದ್ರ**

ಸಮೃದ್ಧ ಭಾರತ


ಶ್ರೀ ಬಾಲಕೃಷ್ಣಜೀ

6-1-76ಡಿ(1), ಚಿಟ್ಪಾಡಿ, ಉಡುಪಿ-576101. ಸ್ಥಿರವಾಣಿ : 0820-2522638 ಚರವಾಣಿ : 9343360236

ಉತ್ತಮ ಸ್ವಾಸ್ಥ್ಯಕ್ಕಾಗಿ

ಬಾಬಾ ರಾಮದೇವ ಸ್ವಾಮೀಜಿಯವರ ನಿರ್ವಹಣೆಯಲ್ಲಿ ಹರಿದ್ವಾರದಲ್ಲಿ ಪತಂಜಲಿ ಆಯುರ್ವೇದ ಲಿಮಿಟೆಡ್ ಹಾಗೂ ದಿವ್ಯ ಫಾರ್ಮಸಿಯಲ್ಲಿ ಉತ್ಪಾದಿಸುತ್ತಿರುವ ಪ್ರಾಮಾಣಿಕ ಹಾಗೂ ಅತ್ಯುತ್ತಮವಾದ ಔಷಧಿಗಳು ಪ್ರಸಾಧನ ಸಾಮಾಗ್ರಿಗಳು ಪೌಷ್ಠಿಕ ಆಹಾರ ಉತ್ಪನ್ನಗಳು ನಮ್ಮಲ್ಲಿ ದೊರೆಯುತ್ತದೆ. ತಮ್ಮ ಸ್ವಾಸ್ಥ ರಕ್ಷಣೆಗಾಗಿ ಈ ಉತ್ಪನ್ನಗಳನ್ನು ಖರೀದಿಸಿ ಉಪಯೋಗಿಸಿರಿ. ಯಾವುದೇ ಉತ್ಪನ್ನಗಳಿಗೆ ಜಾಹೀರಾತಿನ ಹೊರೆ ಇರುವುದಿಲ್ಲ.

ಸಮಯ : ಬೆಳಿಗ್ಗೆ 9-00ರಿಂದ ಮಧ್ಯಾಹ್ನ 1-00, ಅಪರಾಹ್ನ 2-30ರಿಂದ ಸಂಜೆ 7-30ರ ವರೆಗೆ

ದಿನಂಪ್ರತಿ ''ಉಚಿತ ಪ್ರಾಣಯೋಗ ತರಗತಿ''ಗಳು ನಡೆಯುತ್ತಿದೆ. ಸಮಯ : ಮುಂಜಾನೆ 5-30ರಿಂದ 7-00 ಗಂಟೆಯವರೆಗೆ

ವಿ.ಸೂ : ತಮ್ಮ ಪರಿಸರದಲ್ಲಿ "ಉಚಿತ ಪ್ರಾಣಯೋಗ" ಶಿಬಿರಗಳನ್ನು ಆಯೋಜಿಸುವರೆ ವಿಚಾರಿಸಿರಿ. ಮುಂಜಾನೆ 5.00 ರಿಂದ 7.30 ರವರೆಗೆ ಉಚಿತ ಚಾನಲ್ "ಆಸ್ಥಾ" ವನ್ನು ವೀಕ್ಷಿಸಿರಿ.

**ಕೃಷ್ಣಾ ಟ್ರೇಡಿಂಗ್ ಏಜನ್ಸೀಸ್** ಸಗಟು, ದಿನಸಿ, ವ್ಯಾಪಾರಿಗಳು
ಪ್ರೊ : ಯಂ. ಸದಾನಂದ ರಾವ್

ಸಹ ಸಂಸ್ಥೆಗಳು

**ರಾಧಾಮಾಧವ ಸ್ಟೋರ್ಸ್** ಚಿಲ್ಲರೆ ವ್ಯಾಪಾರಿಗಳು
ಪ್ರೊ : ಯಂ. ಸಂತೋಷ್ ರಾವ್

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು ಮತ್ತು ಸುದ್ದಿಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ

## ಚಿಂತನ

ಹೆಣ್ಣು ಎಷ್ಟೇ ಕಲಿತರೂ 'ಅಬಲೆ' ಎಂಬ ಆರ್ಯರ ಮಾತು ಸುಳ್ಳಾದೀತೇ? ದೇಶದೆಲ್ಲೆಡೆ ಹೆಣ್ಣಿನ ಮೇಲೆ ನಡೆಯುತ್ತಿರುವ ಶೋಷಣೆಯನ್ನು ಪ್ರತಿದಿನ ನಾವು ಮಾಧ್ಯಮಗಳ ಮೂಲಕ ತಿಳಿಯುತ್ತಿದ್ದೇವೆ. ಇತ್ತೀಚೆಗೆ ನಮ್ಮ ಪರಿಸರದಲ್ಕಿಯೂ ಇಂತಹ ಘಟನೆಯು ನಡೆದಾಗ ನಾವು ಪುರುಷ ವರ್ಗವನ್ನೇ ದ್ವೇಶಿಸಿ ದೂಷಿಸುತ್ತೇವೆ. "ಎಂತಹ ಗಂಡಸರಪ್ಪ!"ಎಂಬ ಉದ್ಗಾರ.

ಆದರೆ ಎಲ್ಲ ಗಂಡಸರೂ ಕ್ರೂರಿಗಳಾಗಿ, ಪಶುಗಳಂತೆ ಇಲ್ಲವಲ್ಲ. ಅದಲ್ಲದೆ ಒಬ್ಬರಂತೆ ಮತ್ತೊಬ್ಬ ಇರಲು ಸಾಧ್ಯವಿಲ್ಲವಲ್ಲ. ಹಾಗಿರುವಾಗ ಇಡೀ ಗಂಡು ಜಾತಿಯನ್ನೇ ದೂಷಿಸುವ ಈ ಕಾರ್ಯ ಸಲ್ಲದು.


ಎಲ್ಲಕ್ಕಿಂತ ಮುಖ್ಯವಾಗಿ ಹೆಣ್ಣು ಕಲಿತು ಜ್ಞಾನ ಸಂಪಾದಿಸಿಕೊಂಡಂತೆ. ತನ್ನಲ್ಲಿ ತಾನು ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುತ್ತಾಳೆ. ಹಾಗೆ ಪಡೆದ ಆತ್ಮವಿಶ್ವಾಸದಂತೆ ತಾನು ಯಾರಿಂದಲೂ ವಂಚನೆಗೊಳಗಾಗಲು ಸಾಧ್ಯವಿಲ್ಲವೆಂಬ ಹುಚ್ಚು ಧೈರ್ಯ ಹೊಂದುತ್ತಾಳೆ. ಸ್ವೇಚ್ಛಾಚಾರಿಯಂತೆ ವರ್ತಿಸುತ್ತಾಳೆ. ತನ್ನ ಕೆಲಸಗಳ ಒತ್ತಡದಲ್ಲಿ ಹೊತ್ತಲ್ಲದ ಹೊತ್ತಿನಲ್ಲಿ ಏಕಾಂಗಿಯಾಗಿ ಕಾರ್ಯ ಪ್ರವೃತ್ತಳಾಗಿರುತ್ತಾಳೆ.

ಹಾಗೆ ಏಕಾಂಗಿಯಾಗಿರುವ ಮಹಿಳೆಯನ್ನು ಕೆಲವೊಮ್ಮೆ ಒಬ್ಬ ಅಥವಾ ಒಂದಕ್ಕಿಂತ ಹೆಚ್ಚು ಪುರುಷರು ಒಟ್ಟಾಗಿ ಶೋಷಣೆಗೆ ಒಳಪಡಿಸಿದರೆ, ದೈಹಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸಿದರೆ ಏಕಾಂಗಿ ಹೆಣ್ಣು ಏನು ತಾನೆ ಮಾಡಿಯಾಳು? ಎಷ್ಟೆ ಪ್ರತಿಭಟಿಸಿದರೂ ಅವಳಿಗೆ ಆಗುವುದು ಸೋಲೇ ತಾನೆ? ಆದ್ದರಿಂದ ತಾನು ಏಕಾಂಗಿಯಾಗಿರುವ ಹೊತ್ತಿನಲ್ಲಿ ತನ್ನ ರಕ್ಷಣೆಯ ಬಗ್ಗೆ ವ್ಯವಸ್ಥೆ ಇದ್ದೇ ಹೊರ ಹೋಗಬೇಕಲ್ಲವೇ? ಹೆಣ್ಣು ತನ್ನನ್ನು ತಾನು ಒಬ್ಬಂಟಿಯಾಗಿ ರಕ್ಷಿಸಿ ಕೊಳ್ಳುವುದು ಸಿನೆಮಾ ಕಥೆಗಳಲ್ಲಿ ಮಾತ್ರಾ.

ಒಬ್ಬ ಹೆಣ್ಣು ಯಾವುದೇ ಹೊತ್ತಿನಲ್ಲಿ ಯಾವುದೇ ಸ್ಥಳದಲ್ಲಿಯೂ ನಿರ್ಭಯವಾಗಿ ಇರುತ್ತಾ ತನ್ನ ಕಾರ್ಯದಲ್ಲಿ ನಿರತಳಾಗಿದ್ದಾಳೆಂದರೆ ಅದು ಗಾಂಧೀಜಿಯವರ ಕನಸಿನ "ರಾಮರಾಜ್ಯ" ಎಂದರೆ ತಪ್ಪಲ್ಲ ತಾನೆ? ಆದ್ದರಿಂದ ಅಂತಹ "ರಾಮರಾಜ್ಯ" ನಿರ್ಮಾಣವಾಗುವವರೆಗೆ ಹೆಂಗಳೆಯರು ತಮ್ಮನ್ನು ತಾವು "ಧೈರ್ಯವಂತರು"ಎನ್ನುವ ವಿಶ್ವಾಸ ಹೊಂದದೆ ಜವಾಬ್ದಾರಿಯುತವಾಗಿ ಇರುವುದೇ ಲೇಸೆಂದು ತಿಳಿಯೋಣವೇ?.....

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಆದುದರಿಂದ ಇಲ್ಲಿ ಕೊಂಚ ವಿಶ್ರಾಂತಿ ಪಡೆದುಕೋ. ಈ ಶರೀರ ಅನ್ನುವುದು ಇದೆಯಲ್ಲ, ಅದು ಎಲ್ಲ ಸುಖಗಳನ್ನು ಕೊಡುವ ಕಾಮಧೇನುವಿದ್ದಂತೆ. ಅದನ್ನು ಹೆಚ್ಚು ದಣಿಸುವುದು ತರವಲ್ಲ.!" ಈ ಅಮೃತ ಮಧುರವಾದ ಮಾತನ್ನು ಕೇಳಿ ವೃಕನ ಆಯಾಸ ಪರಿಹಾರವಾಯಿತು. ಅವನು ನಡೆದ ಎಲ್ಲಾ ಕಥೆಯನ್ನು ವಟುವಿಗೆ ವಿವರಿಸಿ ಹೇಳಿದನು. ಆಗ ವಟುರೂಪಿ ಭಗವಂತನೆಂದನು "ವೃಕ, ನೀನೊಬ್ಬ ಅಸಾಮಾನ್ಯ ವ್ಯಕ್ತಿ. ನೀನು ಇಂತಹ ಸಣ್ಣ ವಿಷಯಗಳಲ್ಲಿ ವಿಶ್ವಾಸವಿಡುವುದೇ? ನನಗಂತೂ ಆ ಶಂಕರನ ಮಾತಿನಲ್ಲಿ ನಂಬಿಕೆಯಿಲ್ಲ. ಯಾಕೆಂದರೆ ಅವನು ದಕ್ಷಪ್ರಜಾಪತಿಯ ಶಾಪಕ್ಕೊಳಗಾಗಿ ಪಿಶಾಚವಾಗಿದ್ದಾನೆ. ಪಿಶಾಚಗಳ, ಭೂತಪ್ರೇತಗಳ ರಾಜನಾಗಿದ್ದಾನೆ. ಅವನ ಮಾತನ್ನು ನೀನು ಪರೀಕ್ಷಿಸಿ ನೋಡುವುದೇ ಒಳ್ಳೆಯದು. ಮೊದಲು ನಿನ್ನ ತಲೆಯ ಮೇಲೆ ಕೈಯಿಟ್ಟುಕೋ. ಖಂಡಿತವಾಗಿಯೂ ಏನು ಆಗಲಾರದು. ಆಗ ಆ ವಂಚಕನನ್ನು ಕೊಂದು ಬಿಡಬಹುದು" ಈ ಮಾತುಗಳಿಂದ ವೃಕಾಸುರನ ಬುದ್ಧಿಗೆ ಮಂಕು ಬಡಿಯಿತು. ಅವನು ತನ್ನ ತಲೆಯ ಮೇಲೆ ಕೈಯಿಟ್ಟುಕೊಂಡ ಕೂಡಲೆ ಅವನು ಸುಟ್ಟು ಹೋದನು. ಹೀಗೆ ಭಗವಾನ್ ಭೂತನಾಥನು ಬಂದ ಆಪತ್ತಿನಿಂದ ಪಾರಾದನು.

ಒಮ್ಮೆ ದ್ವಾರಾವತಿಯಲ್ಲಿ ಒಬ್ಬ ಬ್ರಾಹ್ಮಣಿಯು ಒಂದು ಮಗುವಿಗೆ ಜನ್ಮ ಕೊಟ್ಟಳು. ಆದರೆ ಆ ಮಗು ಭೂಸ್ಪರ್ಶವಾಗುತ್ತಲೇ ಸತ್ತು ಹೋಯಿತು. ಆಗ ಆ ಮಗುವಿನ ತಂದೆಯಾದ ಬ್ರಾಹ್ಮಣನು ಮಗುವಿನ ಶವವನ್ನು ಕೃಷ್ಣನ ಅರಮನೆಯ ಬಾಗಿಲ ಮುಂದಿಟ್ಟು ವಿಲಾಪಿಸ ತೊಡಗಿದನು, "ಬ್ರಹ್ಮದ್ವೇಷಿಯಾದ, ಶಠಬುದ್ಧಿಯವನಾದ, ಲೋಭಿಯಾದ, ವಿಷಯಾಸಕ್ತನಾದ, ಕ್ಷತ್ರಿಯ ಧರ್ಮವನ್ನು ಪಾಲಿಸದ ರಾಜನ ಕರ್ಮದೋಷದಿಂದಲೇ ನನ್ನ ಮಗು ಸತ್ತು ಹೋಯಿತು. ಹಿಂಸಾಪ್ರಿಯನಾದ, ದುಃಶೀಲನಾದ, ಇಂದ್ರಿಯಗಳ ದಾಸನಾದ ರಾಜನನ್ನು ಹೊಂದಿರುವ ಪ್ರಜೆಗಳು ದಾರಿದ್ರ್ಯದಿಂದ ನಿತ್ಯ ದುಃಖಿಗಳಾಗಿರುತ್ತಾರೆ". ಹೀಗೆ ಆ ಬ್ರಾಹ್ಮಣನು ಎಂಟು ಮಕ್ಕಳನ್ನು ಕಳೆದುಕೊಂಡನು. ಪ್ರತಿಸಲವೂ ಅರಮನೆಯ ಮುಂದೆ ಕುಳಿತು ಅತ್ತನು. ಆ ಸಮಯದಲ್ಲಿ ಶ್ರೀಕೃಷ್ಣನ ಹತ್ತಿರ ಅರ್ಜುನನಿದ್ದನು. ಅವನು ಬ್ರಾಹ್ಮಣನ ಸಮೀಪ ಬಂದು ಗೋಳಿಡುತ್ತಿದ್ದನು.



ಒಂಬತ್ತನೆಯ ಮಗುವೂ ಸಾಯಲು ಯಥಾಪೂರ್ವ ಅರಮನೆಯ ಮುಂದೆ ಕುಳಿತು ಅತ್ತನು. ಆ ಸಮಯದಲ್ಲಿ ಶ್ರೀಕೃಷ್ಣನ ಹತ್ತಿರ ಅರ್ಜುನನಿದ್ದನು. ಅವನು ಬ್ರಾಹ್ಮಣನ ಸಮೀಪ ಬಂದು ಹೇಳಿದನು, "ಬ್ರಾಹ್ಮಣನೇ, ಇಲ್ಲಿ ಯಾರೂ ಧನುರ್ಧಾರಿಗಳಿಲ್ಲವೇ? ಕ್ಷತ್ರಿಯರಾಗಿದ್ದರೂ ಕ್ಷಾತ್ರಧರ್ಮವನ್ನು ತ್ಯಜಿಸಿ ಬ್ರಾಹ್ಮಣರಂತೆ ಯಜ್ಞ ಮಾಡುತ್ತಾ ಕುಳಿತಿರುವರೇ? ಯಾವ ರಾಜ್ಯದಲ್ಲಿ ಬ್ರಾಹ್ಮಣರು ಸಂಪತ್ತು, ಹೆಂಡತಿ, ಮಕ್ಕಳನ್ನು ಕಳೆದುಕೊಂಡು ದುಃಖಿಸುತ್ತಾರೋ ಅಂತಹ ರಾಜ್ಯದಲ್ಲಿರುವ ರಾಜರು ರಾಜವೇಷದ ನಟರು ಅಷ್ಟೆ. ಅವರು ಸುಮ್ಮನೆ ಬದುಕಿರುತ್ತಾರೆ. ಪೂಜ್ಯನೇ. ನಾನು ನಿನ್ನ ಮಗುವನ್ನು ಕಾಪಾಡುತ್ತೇನೆ, ಅದಾಗದಿದ್ದರೆ ನಾನು ಅಗ್ನಿ ಪ್ರವೇಶ ಮಾಡಿ ಕೊಟ್ಟಮಾತನ್ನು ಉಳಿಸದ್ದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ". ಆಗ ಬ್ರಾಹ್ಮಣನೆಂದನು, "ಬಲರಾಮ, ಕೃಷ್ಣ, ಪ್ರದ್ಯುಮ್ನ, ಅನಿರುದ್ಧರಂತಹ ಮಹಾವೀರರಿಂದ ಮಾಡಲಾಗದ ಕಾರ್ಯವನ್ನು ನೀನು ಸಾಧಿಸುವುದೆಂತು? ನಿನ್ನ ಹುಡುಗಾಟಕೆಯ ಮಾತನ್ನು ನಾನು ನಂಬುವುದಿಲ್ಲ." ಅದಕ್ಕೆ ಅರ್ಜುನನು ನುಡಿದನು, "ವಿಪ್ರನೇ, ನಾನು, ಬಲರಾಮನಲ್ಲ, ಕೃಷ್ಣನಲ್ಲ, ಕೃಷ್ಣನ ಮಗನೂ ಅಲ್ಲ. ಗಾಂಡೀವವೆಂಬ ಲೋಕವಿಖ್ಯಾತ ಧನುಸ್ಸನ್ನು ಹಿಡಿದ ಅರ್ಜುನ ನಾನು. ಹಾರುವನೇ, ನನ್ನನ್ನು ಅವಗಣಿಸಬೇಡ. ತ್ರ್ಯಂಬಕ ರುದ್ರನನ್ನೇ ಸಂತೋಷಪಡಿಸಿದ ಶೌರ್ಯ ನನ್ನದು. ನಾನು ಯುದ್ಧ ಮಾಡಿ ಮೃತ್ಯುವನ್ನು ಗೆದ್ದು ನಿನ್ನ ಮಗುವನ್ನು ತಂದು ಕೊಡಬಲ್ಲೆ."

ಅರ್ಜುನನ ಮಾತಿನಿಂದ ಆಶ್ವಸ್ತನಾದ ಬ್ರಾಹ್ಮಣನು ತನ್ನ ಮನೆಗೆ ಹೋದನು. ಹತ್ತನೆಯ ಮಗುವಿನ ಹೆರಿಗೆಯ ಸಮಯ ಬಂದಾಗ ಅವನು ಅರ್ಜುನನಲ್ಲಿಗೆ ಬಂದು ಮಗುವನ್ನು ರಕ್ಷಿಸುವಂತೆ ಬೇಡಿಕೊಂಡನು. ಅರ್ಜುನನು ಶುದ್ಧ ನೀರಿನಲ್ಲಿ ಆಚಮನ ಮಾಡಿ, ಮಹಾದೇವನನ್ನು ನಮಸ್ಕರಿಸಿ ದಿವ್ಯಾಸ್ತ್ರಗಳನ್ನು ಸ್ಮರಿಸಿ ಗಾಂಡೀವಕ್ಕೆ ಹೆದೆಯೇರಿಸಿದನು. ಹೆರಿಗೆ ಮನೆಯ ಹತ್ತು ದಿಕ್ಕುಗಳನ್ನು ದಿವ್ಯಾಸ್ತ್ರಗಳ ಶರಪಂಜರದಿಂದ ಮುಚ್ಚಿಬಿಟ್ಟನು. ಬ್ರಾಹ್ಮಣಿಯ ಗರ್ಭದಿಂದ ಹೊರ ಬಂದ ಮಗು ಯಾರಿಗೂ ಕಾಣದಂತೆ ಆಕಾಶ ಮಾರ್ಗದಲ್ಲಿ ಹೊರಟೇ ಹೋಯಿತು. ಆಗ ಬ್ರಾಹ್ಮಣನು ಆಕ್ರಂದಿಸಿದನು, "ಅಯ್ಯೋ, ನಾನೆಂತಹ ಮೂರ್ಖ! ಈ ನಪುಂಸಕನ ಬೊಗಳೆಯನ್ನು ನಂಬಿದೆನಲ್ಲಾ! ರಾಮ, ಕೃಷ್ಣರಿಂದ ಮಾಡಲಾಗದ ಕೆಲಸವನ್ನು ಬೇರೆಯವರು ಮಾಡುವುದುಂಟೇ! ಸುಳ್ಳು ಬುರುಕ ಅರ್ಜುನನಿಗೆ ಧಿಕ್ಕಾರವಿರಲಿ. ಅವನು ಜಂಬದಿಂದ ಹೊಗಳಿಕೊಳ್ಳುವ ಗಾಂಡೀವಕ್ಕೆ ಧಿಕ್ಕಾರವಿರಲಿ. ಅದೃಷ್ಟವೇ ಕೈಬಿಟ್ಟಿರುವ ಮಗುವನ್ನು ಉಳಿಸಲು ಈ ಪೆದ್ದನು ಪ್ರಯತ್ನಿಸುತ್ತಾನಲ್ಲ!"

(ಮುಂದುವರಿಯುವುದು)

# ಶ್ರೀ ಶಾರದಾ ವೇದಿಕೆಯ ಮಹಾ ಪೋಷಕರಾಗಿ ಶ್ರೀ ಅಂಬಲಪಾಡಿ ರಾಘವೇಂದ್ರ ರಾವ್

ಬೆಂಗಳೂರಿನಲ್ಲಿ ವಾಸ್ತವ್ಯದಲ್ಲಿರುವ ಅಂಬಲಪಾಡಿ ಶ್ರೀ ರಾಘವೇಂದ್ರರಾಯರು ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿ ಸಹಕಾರ ನೀಡಿದ್ದಾರೆ. ಅಂಬಲಪಾಡಿಯ ದಿವಂಗತ ಆನಂದ ರಾವ್ ಹಾಗೂ ದಿವಂಗತ ಕಮಲಾಕ್ಷಿದೇವಿ ದಂಪತಿಗಳ ಪುತ್ರರಾದ ಶ್ರೀ ರಾಘವೇಂದ್ರರಾಯರು ತಮ್ಮ ತಂದೆ ದಿವಂಗತ ಆನಂದರಾಯರು ಉದ್ಯೋಗದ ನಿಮಿತ್ತ ಬೇರೆ ಬೇರೆ ಊರುಗಳಲ್ಲಿ ವಾಸ್ತವ್ಯದಲ್ಲಿದ್ದ ಕಾರಣ ಅಲ್ಲಲ್ಲಿಯೇ ವಿದ್ಯಾಭ್ಯಾಸವನ್ನು ಮುಂದುವರಿಸ ಬೇಕಾಗಿತ್ತು. ಹಾಗೆಯೇ ಪ್ರಾಥಮಿಕ 1ನೇ ಮತ್ತು 2ನೇ ತರಗತಿಯನ್ನು ಬೆಂಗಳೂರು ಶೇಷಾದ್ರಿಪುರದಲ್ಲಿಯೂ, 3ನೇ ತರಗತಿಯಿಂದ 9ನೇ ತರಗತಿಯ ವಿದ್ಯಾಭ್ಯಾಸವನ್ನು ಕೇರಳದ ಎರ್ನಾಕುಲಂನಲ್ಲಿಯೂ, ಮತ್ತೆ 10ನೇ ತರಗತಿಯಿಂದ ಪದವಿಪೂರ್ವದ ಶಿಕ್ಷಣವನ್ನು ಉಡುಪಿಯಲ್ಲಿಯೂ ಪಡೆದಿರುತ್ತಾರೆ. ನಂತರ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿಯಾಗಿ ಸೇರ್ಪಡೆಗೊಂಡು, ಉದ್ಯೋಗದೊಂದಿಗೆ ಪದವಿ ಪರೀಕ್ಷೆಯನ್ನು ತೇರ್ಗಡೆ ಹೊಂದಿದರು. ಸಿಂಡಿಕೇಟ್ ಬ್ಯಾಂಕ್‌ನ ಮಣಿಪಾಲ ಶಾಖೆಯಲ್ಲಿ



ಉದ್ಯೋಗ ಪ್ರಾರಂಭಿಸಿದ ಶ್ರೀ ರಾಘವೇಂದ್ರರಾಯರು ಹರಿಯಾಣ ರಾಜ್ಯದ ಕರ್ನಾಲ್ ಶಾಖೆ, ಉಡುಪಿಯ ಕಡೆಕಾರ್ ಶಾಖೆ, ಉಡುಪಿಯ ಪ್ರಾದೇಶಿಕ ಕಛೇರಿ, ನಂತರ ಮಣಿಪಾಲದ ಪ್ರಧಾನ ಕಛೇರಿ, ಪ್ರಸ್ತುತ ಮೈಸೂರು ಸಿಟಿ ಶಾಖೆಯಲ್ಲಿ ಕರ್ತವ್ಯದಲ್ಲಿದ್ದಾರೆ.

ಇಬ್ಬರು ಹಿರಿಯ ಸಹೋದರಿಯರೂ, ಓರ್ವ ಕಿರಿಯ ಸಹೋದರನನ್ನೂ ಹೊಂದಿರುವ ಶ್ರೀ ರಾಘವೇಂದ್ರರಾಯರು ವಿರಾಜಪೇಟೆಯ ದಿವಂಗತ ಶ್ರೀ ವೆಂಕಟರಮಣ ಹಾಗೂ ಶ್ರೀಮತಿ ಮಹಾಲಕ್ಷ್ಮೀ ದಂಪತಿಗಳ ಪುತ್ರಿ ಶ್ರೀಮತಿ ವಾಣಿ ಆರ್.ವಿ. ಯವರನ್ನು ವಿವಾಹವಾಗಿರುತ್ತಾರೆ. ಕೆನರಾ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿದ್ದ ಶ್ರೀಮತಿ ವಾಣಿ ಆರ್.ವಿ. ಯವರು 2001ರಲ್ಲಿ ಬ್ಯಾಂಕ್‌ನಿಂದ ಸ್ವೇಚ್ಛಾ ನಿವೃತ್ತಿ ಪಡೆದಿರುತ್ತಾರೆ.

ಇವರ ಪುತ್ರಿ ಕುಮಾರಿ ಅನೀಷಾ ರಾವ್ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ಸದ್ಯ ಬೆಂಗಳೂರಿನ ಇನ್‌ಫೋಸಿಸ್ ಕಂಪೆನಿಯಲ್ಲಿ ಉದ್ಯೋಗಿಯಾಗಿರುತ್ತಾರೆ. ಸುಶ್ರಾವ್ಯ ಕಂಠ ಮಾಧುರ್ಯ ಹೊಂದಿರುವ ಈಕೆ ಕರ್ನಾಟಕ ಸಂಗೀತದಲ್ಲ "ವಿದುಷಿ" ಪದವಿಯನ್ನು ವಿಶಿಷ್ಠ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಈ ಬಗ್ಗೆ ಈಗಾಗಲೇ "ಶ್ರೀ ಶಾರದಾ" ಪತ್ರಿಕೆಯ ಎಪ್ರಿಲ್ ತಿಂಗಳ ಸಂಚಿಕೆಯಲ್ಲಿ ಬಂದ ವರದಿಯನ್ನು ನೀವು ಗಮನಿಸಿರಬಹುದು.

ಚಿಕ್ಕಪ್ಪ ಅಂಬಲಪಾಡಿ ಕೃಷ್ಣರಾಯರ ಆದರ್ಶತೆಯನ್ನು ಸದಾ ನೆನೆಯುತ್ತಿರುವ ಶ್ರೀ ರಾಘವೇಂದ್ರರಾಯರು ಶ್ರೀ ಶಾರದಾ ವೇದಿಕೆಗೆ ನೀಡಿರುವ ಈ ಕೊಡುಗೆಯನ್ನು ಶ್ರೀ ಶಾರದಾ ಬಳಗವು ಕೃತಜ್ಞತೆಗಳೊಂದಿಗೆ ಸ್ವೀಕರಿಸಿ, ಅವರಿಗೆ ಹಾಗೂ ಅವರ ಮನೆಯವರಿಗೆ ಅನಂತ ಶ್ರೇಯಸ್ಸು ಉಂಟಾಗಲಿ ಎಂದು ಶ್ರೀ ಶಾರದಾ ಮಾತೆಯಲ್ಲಿ ಪ್ರಾರ್ಥಿಸುತ್ತದೆ.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು.

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಡಾ। ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2013-2014ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2013ರ ಒಳಗೆ ತಲುಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

**ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.2,00,000ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2013ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.**

**- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 101.**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಉದಯಚಂದ್ರ ಪ್ರತಿಭಾ ಪುರಸ್ಕಾರ 2012-13

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2012-13ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 30-09-2013ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%★ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ್‍ಯಾಂಕ್‌ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು ''ಸಂಚಾಲಕರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102'' ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**- ಸಂಚಾಲಕರು, ಯುವವೇದಿಕೆ.**

★(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ್‍ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ : | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ : | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ : | ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.25-07-2013) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.27-07-2013 ಪಂಚಮಿ ಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.21-07-2013 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ

ಉಡುಪಿ/ದ.ಕ. ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸ್ತವ್ಯದಲ್ಲಿರುವ ಯಾವುದೇ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ (ಯಾವುದೇ ವಿಷಯದಲ್ಲಿ) ರ್‍ಯಾಂಕ್ ವಿಜೇತರಾದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ ತಾ.30-09-2013ರ ಒಳಗೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**-ಕಾರ್ಯದರ್ಶಿ**

## ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಕರಂಗಲ್ಪಾಡಿ, ಮಂಗಳೂರು

### (ಸ್ಥಾನಿಕ ಬ್ರಾಹ್ಮಣರ ಸಂಘಗಳ ಹಾಗೂ ಸಂಪನ್ಮೂಲ ವ್ಯಕ್ತಿಗಳ ಜಾಗತಿಕ ಮಟ್ಟದ ಒಕ್ಕೂಟ)

ತಾ.7-7-2013ರಂದು ಮಂಗಳೂರಿನಲ್ಲಿ ಜರಗಿದ ಆಡಳಿತ ಮಂಡಳಿಯ ಸಭೆಯಲ್ಲಿ ನಮ್ಮ ಸಮಾಜವನ್ನು ಪ್ರತಿನಿಧಿಸುತ್ತಿರುವ ವೈದಿಕ ವೃತ್ತಿಯಲ್ಲಿರುವ ಸಮಾಜಬಾಂಧವರ ಶ್ರೇಯೋಭಿವೃದ್ಧಿಗಾಗಿ ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವರೇ ಅದಕ್ಕೆ ಪೂರ್ವಭಾವಿಯಾಗಿ ನಮ್ಮ ಸಮಾಜದ ವೈದಿಕರೆಲ್ಲರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದಾಗಿ ನಿಶ್ಚಯಿಸಲಾಗಿದೆ. ಈ ಮಾಹಿತಿ ಸಂಗ್ರಹಣೆಯ ಜವಾಬ್ದಾರಿಯನ್ನು ಆಯಾ ಪ್ರದೇಶದ ಸದಸ್ಯ ಸಂಘಗಳಿಗೆ ಹಂಚಿಕೊಡಲಾಗಿದ್ದು ಸಂಘದ ಕಾರ್ಯಕರ್ತರು ಮಾಹಿತಿಗಾಗಿ ತಮ್ಮನ್ನು ಸಂಪರ್ಕಿಸಿದಾಗ ಅವರು ಕೇಳಿದ ಮಾಹಿತಿಯನ್ನಿತ್ತು ಸಹಕರಿಸಬೇಕೆಂದು ವೈದಿಕರೆಲ್ಲರನ್ನು ಕೋರುತ್ತಿದ್ದೇವೆ. ಹಾಗೆಯೇ ಒಂದು ವೇಳೆ ಆಗಸ್ಟ್ ಹದಿನೈದರೊಳಗೆ ಯಾರಾದರೂ ವೈದಿಕರನ್ನು ನಮ್ಮ ಕಾರ್ಯಕರ್ತರು ಸಂಪರ್ಕಿಸದೇ ಬಿಟ್ಟುಹೋಗಿದ್ದ ಪಕ್ಷದಲ್ಲಿ ಅವರೇ ಸ್ವತಃ ತಮ್ಮ ಪ್ರದೇಶದ ಸಂಘದ ಅಧ್ಯಕ್ಷರು ಅಥವಾ ಈ ಕಾರ್ಯಕ್ರಮದ ಉಸ್ತುವಾರಿ ಹೊಣೆಹೊತ್ತಿರುವ ಶ್ರೀಪ್ರಫುಲ್ಲಚಂದ್ರರಾವ್, ಅಧ್ಯಕ್ಷರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ, ಫೋನ್ ಸಂಖ್ಯೆ 0820-2520754ನಲ್ಲಿ ಸಂಪರ್ಕಿಸಿ ಇವರಿಗೇ ನೇರವಾಗಿ ತಲುಪಿಸಬಹುದು.

**-ಶ್ರೀಎನ್.ಕೆ.ಜಗನ್ನಿವಾಸರಾವ್, ಕಾರ್ಯದರ್ಶಿ**

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

2013-14 ನೇ ಸಾಲಿನಲ್ಲಿ ಶ್ರೀ ಸಭೆಯು ಸಮಾಜದ ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು (ಬಿ.ಇ., ಎಮ್.ಇ., ಎಮ್.ಬಿ.ಬಿ.ಎಸ್., ಬಿ.ಡಿ.ಎಸ್., ಪಾಲಿಟೆಕ್ನಿಕ್, ಐ.ಟಿ.ಐ., ಎಮ್.ಎ., ಎಮ್.ಎಸ್‌ಸಿ., ಎಮ್.ಕಾಂ, ಸಿ.ಎ., ಬಿ.ಎಡ್., ಡಿ.ಎಡ್.,) ಪಡೆಯಲು ಸಾಲ ವಿದ್ಯಾರ್ಥಿ ವೇತನವನ್ನು ವಿತರಿಸಲಿದೆ. ಈ ಸೌಲಭ್ಯವನ್ನು ಪಡೆಯಲು ಸಮಾಜದ ಅರ್ಹ ವಿದ್ಯಾರ್ಥಿಗಳು ಬಿಳಿ ಹಾಳೆಯಲ್ಲಿ ìಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರುî ಇವರಿಗೆ ಅರ್ಜಿಯನ್ನು ಬರೆಯಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತೀಕರಿಸಬೇಕು.

ಈ ಹಿಂದೆ ಸಾಲ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 2013-14ನೇ ಸಾಲಿನ ಕಂತನ್ನು ಪಡೆಯಲು ìಶ್ರೀ ಸುಬಹ್ಮಣ್ಯ ಸಹಕಾರ ಸಂಘ, ಮಂಗಳೂರುî ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ಈ ಸಾಲಿನಲ್ಲಿ ಈ ಕೆಳಗಿನ ಸಾಲ ವಿದ್ಯಾರ್ಥಿವೇತನ ನಿಧಿಗಳನ್ನು ಕೃತಜ್ಞತಾಪೂರ್ವಕವಾಗಿ ಶ್ರೀ ಸಭೆಯು ಸ್ವೀಕರಿಸಿರುತ್ತದೆ.

| | |
|---|---|
| 1) ಡಾ. ದಯಾನಂದ ಎಸ್. ರಾವ್ ಎಜುಕೇಶನಲ್ ಟ್ರಸ್ಟ್, ಬೆಂಗಳೂರು | ರೂ. 4,00,001.00 |
| 2) ಶ್ರೀ ಎಮ್.ಕೆ. ಶಂಕರನಾರಾಯಣ ರಾವ್ ಸಾ.ವಿ.ವೇ.ನಿಧಿ | ರೂ. 1,00,000.00 |
| 3) ಶ್ರೀ ಎಮ್. ವೆಂಕಟರಾವ್ ಶಾನ್‌ಭೋಗ್, ಕುತ್ತೆತ್ತೂರು ಮತ್ತು ಪದ್ಮಾವತಿ ರಾವ್ ಸಾ.ವಿ.ವೇ.ನಿದಿ | ರೂ. 1,00,000.00 |

**ಕಾರ್ಯದರ್ಶಿ**

## ಡಾ। ಯಂ.ಸತ್ಯನಾಥ್‌ರವರಿಗೆ ಇಂಡಿಯನ್ ಮೆಡಿಕಲ್ ಅಸೋಸಿಯೆಶನ್ ವತಿಯಿಂದ ಸನ್ಮಾನ



ಸುಮಾರು 36 ವರುಷಗಳಿಂದ ಕಾಸರಗೋಡಿನ ಕಲನಾಡಿನಲ್ಲಿರುವ ಕಲನಾಡು ನರ್ಸಿಂಗ್ ಹೋಂನಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಕಾಸರಗೋಡು ಶಿವಬ್ರಾಹ್ಮಣ ಸಭಾದ ಅಧ್ಯಕ್ಷರಾದ ಡಾ। ಯಂ.ಸತ್ಯನಾಥ್‌ರವರನ್ನು ಐ.ಎಮ್.ಎ. ಘಟಕವು ವೈದ್ಯಕೀಯ ಮತ್ತು ಸಮಾಜ ಸೇವೆಗಾಗಿ ಸನ್ಮಾನಿಸಿತು. ಜುಲೈ 1ರಂದು ಜರಗಿದ ಈ ಸಮಾರಂಭಕ್ಕೆ ಕಾಸರಗೋಡು ಐ.ಎಮ್.ಎ. ಅಧ್ಯಕ್ಷ ಡಾ। ಸುರೇಶ್ ಬಾಬು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಡಾ। ಅಬ್ದುಲ್ ಸತ್ತಾರ್, ಹಿರಿಯ ವೈದ್ಯರುಗಳಾದ ಡಾ।ಬಿ.ಎಸ್.ರಾವ್, ಡಾ। ಕೆ.ಕೆ. ಶ್ಯಾನುಭೋಗ್, ಡಾ। ಪಿ.ಯಸ್.ಯನ್.ಭಟ್ ಮುಂತಾದವರು ಮಾತನಾಡಿದರು. ಈ ಸಂದರ್ಭದಲ್ಲಿ ಕಾಸರಗೋಡು ಜಿಲ್ಲೆಯ 200ಕ್ಕಿಂತಲೂ ಹೆಚ್ಚು ಮಂದಿ ವೈದ್ಯರುಗಳು ಮತ್ತವರ ಕುಟುಂಬದವರು ಉಪಸ್ಥಿತರಿದ್ದರು.

ತಾರೀಕು 19ನೇ ಅಕ್ಟೋಬರ್ 1954ರಂದು ಅಜ್ಜಾವರ ಈಶ್ವರ ಶ್ಯಾನುಭೋಗ್ ಮತ್ತು ಗೌರಮ್ಮ ದಂಪತಿಗಳ ಮಗನಾಗಿ ಜನಿಸಿದ ಡಾ। ಸತ್ಯನಾಥ್‌ರವರು ಶಾಲಾ, ಕಾಲೇಜುಗಳಲ್ಲಿ ಉನ್ನತ ಅಂಕಗಳನ್ನು ಗಳಿಸಿ, ಕಲ್ಲಿಕೋಟೆಯ ಸರಕಾರಿ ಮೆಡಿಕಲ್ ಕಾಲೇಜಿನಲ್ಲಿ ಸ್ಟೇಟ್ ಮೆರಿಟ್‌ನಲ್ಲಿ ಆಯ್ಕೆಗೊಂಡು ವೈದ್ಯಕೀಯ ಶಿಕ್ಷಣ ಪಡೆದು, 1977ರಿಂದ ಕಲನಾಡು ನರ್ಸಿಂಗ್ ಹೋಂನ್ನು ನಡೆಸಿಕೊಂಡು ಬರುತ್ತಿದ್ದಾರೆ. 2001ರಲ್ಲಿ ಆಲ್ಟರ್‌ನೇಟಿವ್ ಮೆಡಿಸಿನ್‌ನಲ್ಲಿ ಎಮ್.ಡಿ. ಮತ್ತು 2004ರಲ್ಲಿ ಎಫ್.ಸಿ.ಸಿ.ಜೆ.ಪಿ. ಪಡೆದು ನುರಿತ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಇವರು ಸಮಾಜ ಸೇವೆಯಲ್ಲೂ ತುಂಬಾ ಸಕ್ರೀಯರಾಗಿದ್ದಾರೆ. ಸುಮಾರು 6 ವರ್ಷಕಾಲ ಕಲನಾಡು ಮಹಾವಿಷ್ಣು ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿದ್ದರು. 2005ರಿಂದ 2007ರ ತನಕ 3 ವರ್ಷ ಕಾಸರಗೋಡು ಐ.ಎಮ್.ಎ.ಯ ಅಧ್ಯಕ್ಷರಾಗಿದ್ದು, ಕಾಸರಗೋಡು ಲಯನ್ಸ್ ಕ್ಲಬ್ಬಿನ ಅಧ್ಯಕ್ಷರಾಗಿಯೂ ಸಮಾಜ ಸೇವೆ ಮಾಡಿದರು. ಕಳೆದ 8 ವರ್ಷದಿಂದ ಎಲ್ಲಾ ಬುಧವಾರಗಳಲ್ಲಿ ಕಾಸರಗೋಡಿನ ಸತ್ಯಸಾಯಿ ಸೇವಾ ಮಂದಿರದಲ್ಲಿ ಬಡರೋಗಿಗಳಿಗಾಗಿ ಉಚಿತ ತಪಾಸಣೆ ಮತ್ತು ಚಿಕಿತ್ಸೆ ನೀಡುತ್ತಿದ್ದಾರೆ. ಇಂಡಿಯನ್ ಮೆಡಿಕಲ್ ಅಸೋಸಿಯೇಶನ್‌ನ ಪ್ರಾಂತೀಯ ಮತ್ತು ದೇಶೀಯ ನಿರ್ವಾಹಕ ಸಮಿತಿಯ ಸದಸ್ಯರಾಗಿದ್ದಾರೆ. ಕಳೆದ 2 ವರುಷಗಳಿಂದ ಲಯನ್ಸ್ ಕ್ಲಬ್ಬಿನ ಸಮಾಜಸೇವಾ ಘಟಕದ ಕಾರ್ಯನಿರ್ವಾಹಕರಾಗಿದ್ದಾರೆ. ಇವರನ್ನು ಮುರಳಿ ಮುಕುಂದ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಶಾಲು, ಹಾರ, ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು.

ದಿ। ಮುರಾರಿ ಶರ್ಮ ಮತ್ತು ಸರಸ್ವತೀ ದೇವಿಯವರ ಪುತ್ರಿ ಡಾ। ಗೀತ ಇವರ ಸಹಧರ್ಮಿಣಿ. ಡಾ। ಶ್ರುತಿ, ಎಮ್.ಡಿ. (ಧರ್ಮಪುರಿಯ ನಿವೃತ್ತ ಜಿಲ್ಲಾಧಿಕಾರಿ, ಪುತ್ತಿಗೆ ಮಠದ ಧರ್ಮಪುರಿ ಶಾಖೆ ಮತ್ತು ರಾಘವೇಂದ್ರ ಸ್ವಾಮಿ ಮಠದ ಟ್ರಸ್ಟಿ ಶ್ರೀ ವೆಂಕಟೇಶ್‌ರವರ ಪುತ್ರ ಹಾಗೂ ರಾಘವೇಂದ್ರ ನರ್ಸಿಂಗ್ ಹೋಂನ ಮಾಲಕ ಖ್ಯಾತ ಸರ್ಜನ್ ಡಾ।ರಾಘವೇಂದ್ರ ಎಂ.ಎಸ್. ರವರ ಪತ್ನಿ), ಡಾ। ಶ್ರೇಯಸ್ವಿ, ಎಮ್.ಡಿ. (ಮಂಗಳೂರಿನ ನಿವೃತ್ತ ವಿಮಾನ ನಿಲ್ದಾಣ ಡೈರೆಕ್ಟರ್ ಶ್ರೀ ಎಂ.ಆರ್. ವಾಸುದೇವರವರ ಪುತ್ರ ಡಾ। ಕಾರ್ತಿಕ್, ಎಮ್.ಡಿ. ಅವರ ಪತ್ನಿ) ಡಾ। ಸತ್ಯನಾಥರ ಇಬ್ಬರು ಪುತ್ರಿಯರು. ಅವರ ಪುತ್ರ ಡಾ। ಶಾಶ್ವತ್ ಮಂಗಳೂರಿನಲ್ಲಿ ಎಮ್.ಡಿ ಸೈಕ್ಯಾಟ್ರಿ ಮಾಡುತ್ತಿದ್ದಾರೆ. ಡಾ। ಸತ್ಯನಾಥ್‌ರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ಮುಖ್ಯೋಪಾಧ್ಯಾಯಿನಿ ಹುದ್ದೆಗೆ ಪದೋನ್ನತಿ



ಸುರತ್ಕಲ್ ಹೊಸಬೆಟ್ಟು ರೀಜೆಂಟ್ ಪಾರ್ಕ್ ನಿವಾಸಿ ಶ್ರೀ ಕಾಪು ಮಾಧವರಾವ್ ಇವರ ಧರ್ಮಪತ್ನಿ ಶ್ರೀಮತಿ ಕುಸುಮ ಇವರು ಅನುದಾನಿತ ವಿದ್ಯಾದಾಯಿನೀ ಪ್ರೌಢಶಾಲೆ ಮುಖ್ಯೋಪಾಧ್ಯಾಯಿನಿಯಾಗಿ 31–05–2013ರಂದು ಹಿಂದೂ ವಿದ್ಯಾದಾಯಿನೀ ಸಂಘದ ಪದಾಧಿಕಾರಿಗಳ ಸಮ್ಮುಖದಲ್ಲಿ ಅಧಿಕಾರವನ್ನು ಸ್ವೀಕರಿಸಿರುವರು. ಇವರು ಮಲ್ಲಮಾರು ದಿ। ಎಸ್.ವೆಂಕಟ್ರಮಣ ಶ್ಯಾನುಭೋಗ್ ಮತ್ತು ದಿ।ಶ್ರೀಮತಿ ಸುಲೋಚನ ಇವರ ಸುಪುತ್ರಿ. ಇವರು ಇದೇ ವಿದ್ಯಾಸಂಸ್ಥೆಯ ಹಳೆವಿದ್ಯಾರ್ಥಿನಿಯಾಗಿದ್ದು, ಸಹಶಿಕ್ಷಕಿಯಾಗಿ ಉದ್ಯೋಗಕ್ಕೆ ಸೇರಿ, ಪ್ರಸ್ತುತ ಮುಖ್ಯೋಪಾಧ್ಯಾಯಿನಿ ಹುದ್ದೆಗೆ ಪದೋನ್ನತಿಗೊಂಡಿರುತ್ತಾರೆ. ಶ್ರೀಮತಿ ಕುಸುಮ ಇವರ ಸಾಧನೆಗೆ ಶ್ರೀ ಶಾರದಾ ಬಳಗದ ಶುಭ ಹಾರೈಕೆಗಳು.

## ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ಚಾಲನೆ



ಶ್ರಮದಾನ

ಪುತ್ತೂರು ತಾಲೂಕು ಕೋಡಿಂಬಾಡಿ ಗ್ರಾಮದ ಇತಿಹಾಸ ಪ್ರಸಿದ್ಧ ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಇತ್ತೀಚೆಗೆ ಚಾಲನೆ ದೊರೆಯಿತು. ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ಸಂಪೂರ್ಣ ಶಿಲಾಮಯ ಗರ್ಭಗುಡಿಯು ಜೀರ್ಣೋದ್ಧಾರಗೊಂಡು ಪುನಃ ಪ್ರತಿಷ್ಠೆ ಬ್ರಹ್ಮಕಲಶೋತ್ಸವದ ಸಂಭ್ರಮವನ್ನು ಕಾಣಲಿರುವ ಈ ದೇವಸ್ಥಾನದಲ್ಲಿ ಅನುಜ್ಞಾನಕಲಶ ಮತ್ತು ಬಾಲಾಲಯ ಪ್ರತಿಷ್ಠಾ ಕಾರ್ಯಕ್ರಮವು ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹದಿಂದ ಜೂನ್ 1 ಮತ್ತು 2 ರಂದು ಬ್ರಹ್ಮಶ್ರೀ ವೇದಮೂರ್ತಿ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ನಡೆಯಿತು.

ಶ್ರೀ ದೇವಿಯ ಗರ್ಭಗುಡಿಯನ್ನು ಬಿಚ್ಚುವ ಕಾರ್ಯವು ಜೂನ್ 16ನೇ ಆದಿತ್ಯವಾರದಂದು ಶಿವಬ್ರಾಹ್ಮಣ ಸಮಾಜ ಸೇವಾ ಸಂಘ ಮತ್ತು ಮಿತ್ರ ಸಮಾಜ ಪುತ್ತೂರು ಹಾಗೂ ಊರಿನ ಹಲವು ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು ಮತ್ತು ಊರಿನ ಭಕ್ತಾದಿಗಳಿಂದ ಶ್ರಮದಾನದ ಮೂಲಕ ಜರಗಿತು.

ಈ ಶ್ರಮದಾನದ ಕಾರ್ಯಕ್ರಮದಲ್ಲಿ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾದ ಶ್ರೀ ಉಮೇಶ್ ರಾವ್, ಆಡಳಿತ ಮಂಡಳಿಯ ಅಧ್ಯಕ್ಷರಾದ ಟಿ.ಅಣ್ಣಪ್ಪಯ್ಯ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು. ಮುಂದಿನ ದಿನಗಳಲ್ಲಿ ನಡೆಯುವ ಶ್ರಮದಾನಗಳಲ್ಲಿ ಭಾಗವಹಿಸುವರೇ ದೇವಳದ ಜೀರ್ಣೋದ್ಧಾರ ಸಮಿತಿಯು ಕರೆ ನೀಡಿ, ಈ ಬಗ್ಗೆ ಸಮಿತಿಯ ಕಾರ್ಯದರ್ಶಿ ನಾಗೇಶ್ ಶರ್ಮ (9901247080) ರವರನ್ನು ಸಂಪರ್ಕಿಸಬೇಕಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.


## ಮಾರ್ಪಳ್ಳಿ ಮಂಜುನಾಥ್‌ರ 21ನೇ ಕೃತಿ "ಮಕ್ಕಳ ಮೇಲಿರಲಿ ಕಾಳಜಿ" ಕೃತಿ ಬಿಡುಗಡೆ



ಮಾರ್ಪಳ್ಳಿ ಮಂಜುನಾಥ್. ಇವರು ಬರೆದ "ಮಕ್ಕಳ ಮೇಲಿರಲಿ ಕಾಳಜಿ" (ಲೇಖನಗಳ ಸಂಗ್ರಹ) ಕೃತಿಯನ್ನು ಶಿವಮೊಗ್ಗ ಜಿಲ್ಲೆಯ 8ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತಾ01–06–2013 ರಂದು ಕುವೆಂಪು ರಂಗ ಮಂದಿರದಲ್ಲಿ ಮಾನ್ಯ ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀಕಿಮ್ಮನೆ ರತ್ನಾಕರ್ ಇವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಶಾಸಕರಾದ ಶ್ರೀ ಕೆ.ಬಿ.ಪ್ರಸನ್ನಕುಮಾರ್, ಜಿಲ್ಲಾಧಿಕಾರಿಗಳಾದ ವಿಪುಲ್ ಬನ್ಸಲ್, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶಶಿಕಾಂತ್ ಸೆಂಥಿಲ್, ಮತ್ತು ರಾಜ್ಯದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಪುಂಡಲಿಕ ಹಾಲಂಬಿ ಮತ್ತು ಲೇಖಕ ಮಾರ್ಪಳ್ಳಿ ಮಂಜುನಾಥ್ ಮತ್ತು ಇತರ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

ಜಿಲ್ಲಾ ಸಾಹಿತ್ಯ ಸಮ್ಮೇಳನದ ಎರಡನೇ ದಿನದ ವಿಚಾರ ಗೋಷ್ಠಿಯಲ್ಲಿ ಮಕ್ಕಳ ಸಾಹಿತ್ಯ ಹೇಗಿರಬೇಕು? ಎಂಬ ವಿಚಾರದ ಬಗ್ಗೆ ಲೇಖಕ ಮಾರ್ಪಳ್ಳಿ ಮಂಜುನಾಥ್ ಉಪನ್ಯಾಸ ಮಾಡಿದರು.

# ಕನ್ನಡ ಕವಿಕಾವ್ಯ ಪರಿಚಯ-೭ : ಆದಿಕವಿ ಪಂಪ



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

## ವಿಕ್ರಮಾರ್ಜುನ ವಿಜಯಂ (ಪಂಪ ಭಾರತ) :-

ತೀರ್ಥಯಾತ್ರೆಗಾಗಿ ದಕ್ಷಿಣಕ್ಕೆ ಬಂದ ಅರ್ಜುನನು ಬನವಾಸಿಯಲ್ಲಿ ಪ್ರವೇಶಿಸಿದನೆಂದೂ ಇಲ್ಲಿನ ಪ್ರಕೃತಿ ಸೌಂದರ್ಯಕ್ಕೆ ಮರುಳಾದನೆಂದೂ ಸಂದರ್ಭೋಚಿತವಾಗಿ ಕವಿ ತನ್ನ ಆಡುಂಬೊಲವಾದ ಬನವಾಸಿಯನ್ನು ವರ್ಣಿಸಿದ ಬಗೆ ಹೀಗೆ "ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡ ಮಿಂಪನಾಳ್ದಗೇ-। ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ। ಪಂ ಕೆಡೆಗೊಂಡೊಡಂ ಮಧು ಮಹೋತ್ಸವಮಾದೊಡಮೇನನೆಂಬೆನಾ। ರಂಕುಸಮಿಟ್ಟೊಡಂ ನೆನೆವುದನ್ನ ಮನಂ ಬನವಾಸಿ ದೇಶಮಂ॥" ಮತ್ತೂ ಮುಂದುವರಿದು, "ಏನಾಗಿಯುಂ ಏನೋ ತೀರ್ದಪುದೆ? ತೀರದೊಡಂ ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್" ಎನ್ನುತ್ತಾನೆ. ಇಲ್ಲಿ ಕವಿಯ ತಾಯ್ನೆಲದ ಮೇಲಿನ ಮಮತೆ ವ್ಯಕ್ತವಾಗುತ್ತದೆ.

ಕವಿಯು ಇದರಲ್ಲಿ ಬರೆದದ್ದು ಸಮಗ್ರ ಭಾರತದ ಕತೆಯಾದರೂ ಅಲ್ಲಲ್ಲಿ ತನಗೆ ಬೇಕಾದಂತೆ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಸಂಧಾನಕ್ಕಾಗಿ ಶ್ರೀಕೃಷ್ಣನು ಕೌರವನ ಆಸ್ಥಾನಕ್ಕೆ ಬಂದಾಗ, ಕೌರವನು ಕೃಷ್ಣನನ್ನು ಉಪೇಕ್ಷಿಸುವನು. ಆಗ "ಸಮರ ಸರ್ವಜ್ಞರುಗಳಂಘ್ರಿಗೆ ನಮಿಸಿದರು ಬಹಳೋಲಗದ ಸಂಭ್ರಮದ ಸಿರಿ ತಲೆವಾಗುತಿರ್ದುದು ನೊಸಲ ಕೈಗಳಲೀ। ಕಮಲ ನಯನದ ದೇವನೇ ಸಾಕೆಮಗೆ ಮಾಡುವುದೇನೆನುತ ತತ್ಕ್ಷಮತಿ ಕೌರವಗಿಳಿಯದಿರ್ದನು ಸಿಂಹವಿಷ್ಟರವ।" ಎಂದು ಕುಮಾರವ್ಯಾಸನು ತನ್ನ ಭಾರತದಲ್ಲಿ ಹೇಳಿದರೆ, ಪಂಪನು ಕೃಷ್ಣನು ಬಂದ ಸುದ್ದಿಯನ್ನು ದ್ವಾರಪಾಲಕನು ಹೇಳಲು, 'ಅವನನ್ನು ಒಳಕ್ಕೆ ಕರೆ' ಎಂದು "ಅಂಜನಾಚಲದ ವೋಲ್ ಕಣ್ಗೊಪ್ಪಿ ಬರ್ಪಂಬುಜೋದರನಂ ಮೆಲ್ಲನೆ ನೋಡಿ ಮೆಯ್ಯಲಸಿದಂತೆಂತಾನು ಮೆಳ್ದಿರ್ದು ಕೇಸರಿ ಪೀಠಾಗ್ರದಿನಪ್ಪಿಕೊಂಡು ಪೊಡೆವಟ್ಟುಚ್ಚಾ ಸನಾಸೀನನಾಗಿರವೇಳ್ದರ್ಘ್ಯ ಮನಿತ್ತನಂತರಮೇ ತಾಂ ಕುಳ್ಳಿರ್ದು ದುರ್ಯೋಧನಂ" ಎನ್ನುತ್ತಾನೆ. ಎಷ್ಟಾದರೂ ಚಕ್ರವರ್ತಿಯಾದ ದುರ್ಯೋಧನನಿಗೆ ಅತಿಥಿ ಸತ್ಕಾರ ತಿಳಿದಿಲ್ಲವೆ? ಮಹಾಭಾರತ ಯುದ್ಧದ ಕೊನೆಯಲ್ಲಿ ಕೌರವರ ವಧೆಯಾಗಿ ಪಾಂಡವರು ಗೆದ್ದಾಗ ಧರ್ಮರಾಜನು "ನೀಂ ತಲೆವೀಸದುರ್ವ ರಾಶ್ರೀಯನಿದಾಗದೆನ್ನ ದೊಳಕೊಳ್ ಪರಮೊತ್ಸವದಿಂ ಗುಣಾರ್ಣವಾ" ಎಂದು ಅರ್ಜುನನನ್ನು ಅರಸನಾಗಲು ಒಡಂಬಡಿಸುತ್ತಾನೆ, ಪರಿಣಾಮವಾಗಿ "ಅರಿಕೇಸರಿಯುಂ (ಅರ್ಜುನನನ್ನು) ವಿಷ್ಟರದೊಳ್ ಕುಳ್ಳಿರಿಸಿ ಪಂಚರತ್ನ ಶಿಖಾವಿರಾಜ ಮಾನನಪ್ಪ ಪಟ್ಟಮನೆತ್ತಿ, ಯಾದವವಂಶ ಸಂಭೂತೆಯುಂ, ಅನೇಕ ಲಕ್ಷಣೋಪೇತೆಯುಮಪ್ಪ ಸುಭದ್ರೆಗೆ ಮಹಾದೇವಿ ಪಟ್ಟಮಂ ಕಟ್ಟಿ" ಎಂದು ಪಂಪನು ತನ್ನೊಡನೆಯು ಅರಿಕೇಸರಿ (ಅರ್ಜುನ)ಯನ್ನು ಅರಸನನ್ನಾಗಿಸುತ್ತಾನೆ. ಇಂತಹ ಎಷ್ಟೊ ಬದಲಾವಣೆಗಳನ್ನು ಈತನ ಭಾರತದಲ್ಲಿ ಗುರುತಿಸಬಹುದು. ಇದರಿಂದಾಗಿಯೇ ಏನೋ ಇವನ ಒಡೆಯ ಅರಿಕೇಸರಿಯು ಪಂಪನಿಗೆ ನಿತ್ಯ ತೊಡುವ ಪಂಚರತ್ನಗಳನ್ನೂ, ತಾನು ಕೊಡುವ ರಾಜೋಚಿತವಾದ ಉಡುಗೊರೆಗಳನ್ನೂ, ಅನುಭವಿಸಲು ಕೆಲವು ಗ್ರಾಮಗಳನ್ನು 'ಉಚಿತ'ವಾಗಿತ್ತು ಸನ್ಮಾನಿಸಿದನು.

ಪ್ರತಿಭಾವಂತನಾದ ಪಂಪನು ತನ್ನ ಕಾಲದ ಧರ್ಮ, ವೀರ, ತ್ಯಾಗ, ವ್ರತಗಳ ಮೌಲ್ಯದ ಅರಿವಿನ ಹಿನ್ನಲೆಯಲ್ಲಿ ಅಶ್ವತ್ಥಾಮನ ದುಡುಕು, ಭೀಮನ ಸಿಡುಕು, ಭೀಷ್ಮರ ಒಳತೋಟಿ, ಕರ್ಣನ ಭಾಗ್ಯಹೀನತೆ, ಶಲ್ಯನ ಮತಾಂಧತೆ, ಧೃತರಾಷ್ಟ್ರನ ಬಗೆಗುರುಡು, ಆತ್ಮಸಾಕ್ಷಿಯಂತೆ ಎಚ್ಚರಿಸುವ ವಿದುರನ ವಾಕ್ಯಗಳು, ಮುರಿದೇನೇ ಹೊರತು ಮಣಿಯುವುದಿಲ್ಲ ಎಂಬ ಕೌರವನ ಛಲ, ಕೃಷ್ಣನ ವ್ಯವಹಾರ ಕೌಶಲ್ಯ ಇತ್ಯಾದಿಗಳು ಚೆನ್ನಾಗಿ ಮನದಟ್ಟಾಗುವಂತೆ ಚಿತ್ರಿಸಿರುವನು. ಕರ್ಣನ ಪಾತ್ರ ಚಿತ್ರಣದಲ್ಲಿ ಕರುಣರಸದ ಕೋಡಿಯನ್ನೇ ಹರಿಸಿದ್ದಾನೆ-'ಪಿಡಿದನೆ ಪುರಿಗಣೆಯ ನೆರಳ್ನುಡಿದನೆ ಬಳ್ಕಿದನೆ ತಾನೆ ತನ್ನನೆ ಚಲಮಂ ಪಿಡಿದಳಿದನೆಂದು ದೇವರ ಪಡೆ ಗಡಣದೆ ಪೊಗಳ್ದುದು ಇನತನೂಜನ ಗಂಡಂ" ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ" ಎಂದಿರುವನು. ರೂಪಕ ನಿರ್ಮಾಣ ಶಕ್ತಿ ಮತ್ತು ಆಡು ಮಾತಿನ ಸೊಗಡು (ದೇಸಿ) ಇವು ಪಂಪನ ವೈಶಿಷ್ಟ್ಯ. ಉದಾ:-'ಕಣ್ಕುರುಡಾದೊಡೇನೊ ಕುರುಡಾಗಲೆವೇಳ್ಪುದೆ ನಿಮ್ಮ ಬುದ್ಧಿಯುಂ' 'ವಿಷಮೊಳ್ಗೆಗುಳ್ದೊಡಮದೊಳ್ಗೆಯೆ ಕಾಳಿಯ ನಾಗನಾಗದು' 'ಎನ್ನ ನುಡಿ ಟಾಠ ಡಾಢಣಂ' 'ಪಣನನಿರಿದು ಪಗೆಗೊಂಡರ್' 'ಮುಳಿವೊಡಂ ಎಯ್ದೆ ಕೇಳ್ದು ಮುಳಿ' 'ಸೂಜಿಯ ಕೂರ್ಪು ಕುಂಬಳದೊಳಡಂಗುವಂತೆ' 'ಓಲಗಿಸಿ ಬಾಳ್ವುದೆ ಕಷ್ಟಮಿಳಾಧೀನಾಥರಂ' ಇಂತಹ ಸಹಸ್ರಾರು ಉದಾಹರಣೆಗಳನ್ನು ಕೊಡಬುದು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಆ ಚಂದ್ರಾರ್ಕಸ್ಥಾಯಿಯಾಗಿ ನಿಲ್ಲಬಲ್ಲ ಕವಿಗಳಲ್ಲಿ ಪಂಪ ಅಗ್ರಗಣ್ಯ!

(ಮುಂದುವರಿಯುವುದು...)

## ನಾವು ಹೇಗಿರಬೇಕು ?

ನಾವು ಆಡುವ ಮಾತಿನಲ್ಲಿ ಪ್ರೀತಿ ಇರಬೇಕು
ನಾವು ನೋಡುವ ನೋಟದಲ್ಲಿ ಹಿತ ಕಾಣಬೇಕು
ನಾವು ಕೇಳುವ ಶಬ್ದ ಕಿವಿಗೆ ಮಧುರವಾಗಿರಬೇಕು.
ನಾವು ಮಾಡುವ ಕೆಲಸ ಕರ್ತವ್ಯ ನಿಷ್ಠೆ ಸತ್ಯ ಧರ್ಮದಿಂದ ಕೂಡಿರಬೇಕು
ನಾವು ನಡೆಸುವ ಜೀವನ ಇತರರಿಗೆ ಮಾದರಿಯಾಗಿರಬೇಕು.
ನಾವು ಪೂಜಿಸುವ ದೇವ ಭಕ್ತಿ ಬಲು ಶ್ರದ್ಧೆಯಿಂದಿರಬೇಕು.
ನಾವು ವಾಸಿಸುವ ಮನೆ ತುಂಬಾ ಶುಚಿಯಾಗಿರಬೇಕು
ನಾವು ತಿನ್ನುವ ಆಹಾರ ಶುದ್ಧ ಹಾಗೂ ಶಕ್ತಿಯುತವಾಗಿರಬೇಕು
ನಾವು ಕಲಿಯುವ ಅಕ್ಷರ ಜ್ಞಾನದ ಬೆಳವಣಿಗೆಗೆ ಸಹಾಯವಾಗಿರಬೇಕು
ನಾವು ನಡೆಯುವ ದಾರಿ ಕಷ್ಟವಿರದೆ ಸುಗಮವಾಗಿರಬೇಕು
ನಾವು ಕಳೆಯುವ ಆಯುಷ್ಯ ಮುಕ್ತಿಯ ಕಡೆಗಿರಬೇಕು
ನಾವು ನಮ್ಮನ್ನು ಮರೆತು ಸದಾ ಧ್ಯಾನದಲ್ಲಿರಬೇಕು.

-ಮೋಹನರಾವ್ ಮಂಗಳೂರು

# ಮೌನ ಮಾತಾದಾಗ (ಭಾಗ-2)

-ಕ.ಸು.ಶ್ರೀ

ಈ ಹಿಂದೆ ತಿಳಿಸಿದಂತೆ, ಮೌನದಿಂದ ಆದೆಷ್ಟೊ ಪರಿಹಾರವನ್ನು ಕಂಡು ಹಿಡಿಯಬಹುದು. ಮಾತಿನಿಂದ ಕೃತಿ ಲೇಸು ಎಂಬ ವಿಚಾರ ನಿಮಗೆಲ್ಲಾ ತಿಳಿದಿದೆ ಅಲ್ಲವೆ? ಮೌನದಿಂದ ಇಡೀ ಜಗತ್ತನ್ನೆ ಗೆಲ್ಲಬಹುದು. ಈ ವಿಚಾರ ತಪ್ಪು ಎಂದು ತಿಳಿಸಿದರೆ, ಇಂದು ಅದು ತಪ್ಪಾಗದು, ಅದರ ಬದಲಿಗೆ, ನಿಮ್ಮ ವಿಚಾರವೇ ತಪ್ಪು ಎಂದು ಪ್ರತಿಪಾದಿಸುತ್ತಾರೆ.

"ಸಂಭಾವಾಮಿ ಯುಗೆ, ಯುಗೆ" ಎಂದು ಶ್ರೀ ವಿಷ್ಣು ಈ ಕಲಿಯುಗದಲ್ಲಿ ಮೌನದ ರೀತಿಯಲ್ಲಿ ಪ್ರೀತಿಯಲ್ಲಿ ಲೇಖಕನ ಮನಸ್ಸಿನಿಂದ ಸಾಹಿತ್ಯದ ಮೂಲಕ ಈ ಕನ್ನಡ ಭಾಷೆಯಿಂದ ಕನ್ನಡಿಗರಿಗಾಗಿಯೇ, ಈ ನಾಡಿನ ಹಾಗೂ ಈ ದೇಶಕ್ಕೆ ಒಳಿತನ್ನು ಒದಗಿಸಬೇಕೆಂದು ತಿಳಿದು ಅವತಾರ 'ಗೊಂಡಿದ್ದಾನೆ. ಮೌನವೆಂದರೆ ಏನು? ಯಾವಾಗ ಇರುತೇ? ಎಂಬ ಮನಸ್ಸಿನಲ್ಲಿ ಕಲಹವನ್ನು ನಿರ್ಮಿಸುತ್ತಲ್ಲದೆ? ಇದಕ್ಕೆ ಉತ್ತರವನ್ನು ತಿಳಿಸಲೇ ಬೇಕು.

ಮೌನವೆಂದರೆ, ಯಾವುದೇ ತಪ್ಪನ್ನು ಕಂಡರೂ ಸುಮ್ಮನಿರುವುದು ಮೌನವಲ್ಲ. ಅದೇ ರೀತಿ ನಮಗೆ ಯಾವುದೇ ರೀತಿಯ ತೊಂದರೆಯಾದಾಗಲೂ ಸುಮ್ಮನೆ ಇರುವುದು ಮೌನವಲ್ಲ. ಮೌನವೆಂದರೆ ಅಂದಿನ ಸ್ವಾತಂತ್ರ್ಯದ ಹೋರಾಟದಂತೆ ಇಂದಿನ ಹೋರಾಟದ ಮಾರ್ಗವಾಗಿದೆ. ಮೌನದ ಮಾತುಗಳಿಂದ, ಸತ್ಯ, ನ್ಯಾಯ ನೀತಿಯನ್ನು ಗೆಲ್ಲಬಹುದು. ಮೌನದ ಮಾತುಗಳು ಈ ರೀತಿಯ ಜೀವನಕ್ಕೆ ಹೊಸ ಅಸ್ತ್ರವಾಗುತ್ತದೆ ಎಂದರೆ ತಪ್ಪಾಗುತ್ತದೆ. ಇಂದಿನ ಈ ಸಂದರ್ಭದಲ್ಲಿ ಸಮಸ್ಯೆಗಳಿಗೆ ಪರಿಹಾರದ ಮಾರ್ಗವೇ ಮೌನ. ಮೌನದಿಂದ ಯಾವ ರೀತಿಯ ಪರಿಣಾಮಗಳು ಈ ಕನ್ನಡಿಗರಿಗೆ ತಿಳಿಯುತ್ತದೆ ಎಂಬುದು ಮುಂದೆ ನಿಮಗೆಲ್ಲಾ ತಿಳಿಯುತ್ತದೆ. ನಾನು ಈ ಸಂದರ್ಭದಲ್ಲಿ ತಿಳಿಸುವ ವಿಷಯವೆಂದರೇ ಯುವ ಶಕ್ತಿಗಳು ಈ ನಾಡಿನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮೌನದಿಂದ ಹೋರಾಡಬೇಕು. ಈ ರೀತಿ ಮೌನದಿಂದ ಸಕಲ ಸಮಸ್ಯೆಗಳನ್ನು ಪರಿಹರಿಸಬಹುದು.

ಯಾವುದೇ ರೀತಿಯಲ್ಲೂ ನಮ್ಮ ಆತ್ಮಕ್ಕೆ ವಂಚನೆ ಮಾಡಬಾರದು. ನಾವು ಈ ದೇಶದ ಆಡಳಿತವನ್ನು ಸುರಕ್ಷಿತ ರೀತಿಯಲ್ಲಿ ಸರಿಪಡಿಸಬಹುದು. ನಾವು ದ್ವೇಷ, ರಕ್ತದಿಂದ ಯಾವುದೇ ವಿಚಾರವನ್ನು ಗೆಲ್ಲಲಾಗದು. ಅದಕ್ಕೆ ಮೌನದ ಬರಹದಿಂದ, ಲೇಖನ ಶಕ್ತಿಯಿಂದ ಈ ನಾಡಿನ ಎಲ್ಲಾ ಜನರಿಗೂ ತಿಳಿಸಿ, ಮನವರಿಕೆ ಮಾಡಿ, ಈ ಪ್ರಜಾಪ್ರಭುತ್ವವನ್ನು ಬದಲಿಸಬಹುದು. ಅದಕ್ಕೆ ಮೌನದ ಅಸ್ತ್ರವೇ ಶ್ರೇಷ್ಠ.

**ಹನಿಗವನ**

### ಇದು ಭೂಷಣ

ಸರಳತೆಯೆ ಭೂಷಣವು
ಸಚಿವ ಮಹಾಶಯರಿಂಗೆ।
ನುಡಿದಂತೆ ನಡೆಯುವುದು
ಶಾಸಕರಿಗೆ ಭೂಷಣವು।
ನಿಷ್ಠೆಯಲಿ ದುಡಿಯುವುದು
ಅಧಿಕಾರಿಗೇ ಭೂಷಣವು।
ರಾಷ್ಟ್ರ ಸಂರಕ್ಷಣೆಯೇ
ಪ್ರಜೆಗಳಗೆ ಭೂಷಣವು।
ಭೂಷಣಕೆ ಭೂಷಣ ಇದು ಭೂಷಣ.

### ಶಾಂತಿ-ಕ್ರಾಂತಿ

ಪತಿಯ ಮನ
ಗೆದ್ದಾಗ ಸತಿ
ಮನೆಯಲಿ ಶಾಂತಿ।
ಸತಿಯ ಮನ
ಗೆಲ್ಲದಿರೆ ಪತಿ
ಮನೆಯಲ್ಲಿ ಕ್ರಾಂತಿ॥

### ಖರೀದಿ

ಅಂದು
ಆಳುಗಳನ್ನು
ಖರೀದಿಸುವ
ಪರಿಪಾಟ
ಇತ್ತು।
ಇಂದು
ಆಟಗಾರರನ್ನು
ಖರೀದಿಸುವ
ಹಂತಕ್ಕೆ
ತಲುಪಿತು॥

### ಕನಸು

ನಲ್ಲನ ಕನಸು ಕಾಣುತ್ತಿದ್ದ
ಆಕೆಯ ಸೆರಗು
ಜಾರಿದೆ.
ಕಾರಣ
ಆಕೆ ಕುಡಿದ
ಪಾನೀಯ ತನ್ನ
ಪ್ರಭಾವ ಬೀರಿದೆ.

### ವಿಧವೆ

ಹಚ್ಚ ಹಸಿರು ಕಾಡಿನ
ನಡುವೆ ಎಲೆ
ಉದುರಿ ಒಣಗಿ
ನಿಂತು ಮರದ
ಮೇಲೆ ಪವಡಿಸಿರುವ
ರೆಕ್ಕೆ ಮುರಿದ
ಒಂಟಿ ಹಕ್ಕಿ

ಎಂ.ಗಣೇಶ ರಾವ್, ಬಾರಕೂರು

### ಏರಿಳಿಕೆ

ದಿನ ದಿನವು
ಏರುತಿದೆ ವಸ್ತುಗಳ
ಧಾರಣೆಯು।
ದಿನದಿನವು
ಇಳಿಯುತಿದೆ
ಮಾನವನ
ಬೆಲೆಯು॥

ರಚನೆ: **ಕೆ.ಗೋಪಾಲರಾವ್. ಕಡಬ.**

## ಕೋಲ್‌ಇಂಡಿಯಾದಲ್ಲಿ 'ಜನರಲ್ ಮೆನೇಜರ್' ಆಗಿ

# ಶ್ರೀ ಯು.ಸುರೇಶ ರಾವ್ ಕನ್ಯಾನ



ಸ್ಥಾನಿಕ ಬ್ರಾಹ್ಮಣ ಸಮಾಜದ ಓರ್ವ ಯುವಕ 1982ರಲ್ಲಿ ಕೋಲ್‌ಇಂಡಿಯಾ ನಾಗಪುರದಲ್ಲಿ ಉದ್ಯೋಗಕ್ಕೆ ಸೇರಿ ನಿಷ್ಠೆ, ದಕ್ಷತೆಯಿಂದ ಪ್ರಾಮಾಣಿಕವಾಗಿ ದುಡಿದು ಸಾಧನೆಯಿಂದ ಹಂತ ಹಂತವಾಗಿ ಬಡ್ತಿ ಹೊಂದುತ್ತಾ ಒರಿಸ್ಸಾ, ಧನಬಾದ್, ಜಾರ್ಕಂಡ್, ನಾಗಪುರ ಹೀಗೆ ನಾನಾ ಕಡೆಗಳಲ್ಲಿ ಕಾರ್ಯ ನಿರ್ವಹಿಸಿ ಇದೀಗ ಅತ್ಯುನ್ನತ ಹುದ್ದೆಯಾದ ಜನರಲ್ ಮೆನೇಜರ್ (G.M) ಸ್ಥಾನಕ್ಕೆ ಬಡ್ತಿ ಹೊಂದಿದ್ದಾರೆ ಇವರೇ ಕನ್ಯಾನದ ಶ್ರೀ ಸುರೇಶ್‌ರಾವ್.

ಇವರ ತಂದೆ ನಿವೃತ್ತ ಶಿಕ್ಷಕರಾದ ದಿ|ಯಂ.ಶ್ರೀನಿವಾಸ ರಾವ್ ಕನ್ಯಾನ. ತಾಯಿ ದಿ| ಶ್ರೀಮತಿ ಕೃಷ್ಣಮ್ಮ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಕನ್ಯಾನದಲ್ಲೇ ಮುಗಿಸಿ ಕಾಲೇಜು ಶಿಕ್ಷಣವನ್ನು ಮೈಸೂರಿನಲ್ಲಿ ಪೂರೈಸಿದರು. ಹೀಗೆ ಇವರು 1976 ರಲ್ಲಿ ಬಿ.ಎ. ಮತ್ತು 1978 ರಲ್ಲಿ ಯಂ.ಎಸ್.ಡಬ್ಲ್ಯೂ. ಮಾಡಿ ಉದ್ಯೋಗಕ್ಕೆ ಸೇರಿದರು. ಉದ್ಯೋಗದ ಜತೆಯಲ್ಲೇ 2002ರಲ್ಲಿ ಎಲ್.ಎಲ್.ಬಿ. ಯನ್ನೂ ಮಾಡಿಕೊಂಡಿರುತ್ತಾರೆ.

ಸರಳ ಸಜ್ಜನಿಕೆಯ ಸುರೇಶರಾಯರ ಪತ್ನಿ ಕಡಬ ಜೆಡೆಮನೆ ದಿ|ರಾಮದಾಸ ರಾವ್, ಶ್ರೀಮತಿ ವಾರಿಜ ಇವರ ಪುತ್ರಿ ಶ್ರೀಮತಿ ವಿದ್ಯಾವತಿ. ಈ ಆದರ್ಶ ದಂಪತಿಗಳ ಓರ್ವ ಪುತ್ರ ಚಿ| ಶೈಲೇಶ್ ರಾವ್ H.C.L Technology ಬೆಂಗಳೂರಿನಲ್ಲಿ ಪೂರೈಸಿ ಪ್ರಕೃತ ಸ್ವೀಡನ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಗಳಾದ ಕು|ಶ್ವೇತಾ ರಾವ್ 'ಸಿಂಟೆಲ್ ಇಂಡಿಯಾ' ಪೂನಾದಲ್ಲಿ ಉದ್ಯೋಗಕ್ಕೆ ಸೇರಿರುತ್ತಾರೆ.

ಶ್ರೀ.ಯು.ಸುರೇಶ ರಾವ್ ಮಂಗಳೂರಲ್ಲಿ ಮನೆ ಕಟ್ಟಿದ್ದು ಕಳೆದ ಮೇ 13ರಂದು ಗೃಹ ಪ್ರವೇಶ ನಡೆದಿರುತ್ತದೆ. ಶ್ರೀಯುತರು ಇನ್ನಷ್ಟು ಪ್ರಗತಿ ಹೊಂದಲಿ, ಸಮಾಜಕ್ಕೆ ಕೀರ್ತಿಯನ್ನು ತರುವಂತಾಗಲಿ ಎಂಬುದಾಗಿ ಸಮಾಜದ ವತಿಯಿಂದ ಶುಭ ಹಾರೈಕೆ.

ವರದಿ: **ಶ್ರೀಮತಿ ವಾಣಿ. ಜೆಡೆಮನೆ ಕಡಬ.**

## ಸಿಂಡಿಕೇಟ್ ಬ್ಯಾಂಕ್‌ನ ಜನರಲ್ ಮ್ಯಾನೇಜರ್ ಆಗಿ

# ಐ.ಪಿ.ನಾಗರಾಜ್ ರಾವ್



ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ನಿರ್ದೇಶಕರಾಗಿದ್ದ ಐ.ಪಿ.ನಾಗರಾಜ್ ರಾವ್ ಅವರು ಸಿಂಡಿಕೇಟ್ ಬ್ಯಾಂಕಿನ ಜನರಲ್ ಮ್ಯಾನೇಜರ್ ಆಗಿ ಬಡ್ತಿ ಪಡೆದು ಅಧಿಕಾರ ಸ್ವೀಕರಿಸಿದ್ದಾರೆ.

ಬಂಟ್ವಾಳ ತಾಲೂಕಿನ ಅಮ್ಮುಂಜೆ ಗ್ರಾಮದ ದಿವಂಗತ ಐ.ಪಿ.ಸಂಜೀವ ರಾವ್ ಹಾಗೂ ದಿವಂಗತ ರತ್ನಮ್ಮ ದಂಪತಿಗಳ ಪುತ್ರರಾದ ಶ್ರೀಯುತರು ತವರಿನಲ್ಲಿಯೇ ಪ್ರಾಥಮಿಕ, ಪ್ರೌಢವಿದ್ಯಾಭ್ಯಾಸ ಪಡೆದು, ಮಂಗಳೂರಿನ ಸ್ಯೆಂಟ್ ಅಲೋಶಿಯಸ್ ಕಾಲೇಜಿನಲ್ಲಿ ಪದವಿ ತರಗತಿಯನ್ನು ಪೂರ್ಣಗೊಳಿಸಿದರು. ನಂತರ ಸಿ.ಎ. ಪರೀಕ್ಷೆಯನ್ನು ಮಂಗಳೂರಿನಲ್ಲಿಯೇ ಮುಗಿಸಿ ಕರ್ನಾಟಕ ಬ್ಯಾಂಕಿನಲ್ಲಿ ಸ್ವಲ್ಪ ಸಮಯ ಉದ್ಯೋಗಿಯಾಗಿದ್ದರು. 1985ರಲ್ಲಿ ಸಿಂಡಿಕೇಟ್ ಬ್ಯಾಂಕ್ ಅಧಿಕಾರಿಯಾಗಿ ಸೇರ್ಪಡೆಗೊಂಡು ಮುಂದೆ ತಮ್ಮ ಕಾರ್ಯ ದಕ್ಷತೆಯಿಂದ ಉದ್ಯೋಗದಲ್ಲಿ ಬಡ್ತಿ ಪಡೆಯುತ್ತಾ ಮಣಿಪಾಲ, ಆಗ್ರಾ, ಡೆಲ್ಲಿ, ಉಡುಪಿ, ಬೆಂಗಳೂರು ಹೀಗೆ ಬೇರೆ ಬೇರೆ ಊರುಗಳಲ್ಲೆ ಬ್ಯಾಂಕಿನ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಇದೀಗ ಬೆಂಗಳೂರಿನ ಕಾರ್ಪೊರೇಟ್ ಕಛೇರಿಯಲ್ಲಿ ಮೈಕ್ರೋಸಾಫ್ಟ್ ಆಂಡ್ ಮೀಡಿಯಾ ಎಂಟರ್‌ಪ್ರೈಸಸ್ ಮತ್ತು ರಿಟೇಲ್ ಬ್ಯಾಂಕಿಗ್ ವಿಭಾಗದಲ್ಲಿ ಜನರಲ್ ಮ್ಯಾನೇಜರ್ ಆಗಿ ಬಡ್ತಿ ಪಡೆದು ಕಾರ್ಯ ನಿರ್ವಹಿಸುತ್ತಿದ್ದಾರೆ.

ಬೆಳ್ತಂಗಡಿಯ ದಿವಂಗತ ಪಾರ್ಥೀವೇಶ್ವರ ಶರ್ಮಾ ಹಾಗೂ ಶ್ರೀಮತಿ ಸುನಂದಾ ಶರ್ಮಾ ದಂಪತಿಗಳ ಪುತ್ರಿ ಭುವನೇಶ್ವರಿಯವರನ್ನು ವಿವಾಹವಾಗಿರುವ ಶ್ರೀಯುತ ನಾಗರಾಜ್ ರಾವ್ ದಂಪತಿಗಳಿಗೆ ಓರ್ವ ಪುತ್ರ ಸಂಜೀವ ಕುಮಾರ್ (ಸೀನಿಯರ್ ಇಂಜಿನಿಯರ್ ಎಲ್.ಆಂಡ್. ಟಿ. ಕಂಪನಿ, ಕೂಡಂಕುಳಂ ತಮಿಳ್ನಾಡು) ಹಾಗೂ ಓರ್ವ ಪುತ್ರಿ ಕುಮಾರಿ ಸುಷ್ಮಾ (ಕಂಪ್ಯೂಟರ್ ಇಂಜಿನಿಯರ್ ಆಗಿ ಎಚ್.ಪಿ ಸಹ ಸಂಸ್ಥೆಯಲ್ಲಿ ಉದ್ಯೋಗಿ)ರನ್ನು ಹೊಂದಿದ್ದಾರೆ.

ಶ್ರೀ ಐ.ಪಿ ನಾಗರಾಜ್‌ರಾಯರ ಈ ಸಾಧನೆಗೆ ಶ್ರೇಯಸ್ಸಾಗಲಿ ಎಂದು ಶ್ರೀ ಶಾರದಾ ಹಾರೈಕೆ.

## ಪ್ರಾಂಶುಪಾಲರಾಗಿ ಪ್ರೊ| ಕೆ.ರಾಮಮೂರ್ತಿ ರಾವ್

ಮೈಸೂರಿನಲ್ಲಿ ವಾಸ್ತವ್ಯದಲ್ಲಿರುವ, ಪ್ರತಿಷ್ಠಿತ ಮೈಸೂರಿನ ಜೆ.ಎಸ್.ಎಸ್.ಮಹಾವಿದ್ಯಾಪೀಠದ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ವಾಣಿಜ್ಯ ಶಾಸ್ತ್ರದ ಪ್ರಾಧ್ಯಾಪಕರಾಗಿ ಕಳೆದ 32 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಪ್ರೊ| ಕೆ. ರಾಮಮೂರ್ತಿ ರಾವ್ ಇವರು ನಂಜನಗೂಡಿನ ಜೆ.ಎಸ್.ಎಸ್.ಕಾಲೇಜಿನ ಪ್ರಾಂಶುಪಾಲರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಶ್ರೀಯುತರು ಶಿಕ್ಷಣ ಕ್ಷೇತ್ರದ ಸೇವೆಯ ಜತೆಗೆ ನಾಟ್ಯಕಲಾರಂಗಕ್ಕೂ ಅಪಾರ ಕೊಡುಗೆ ನೀಡಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ 2 ಅವಧಿಗೆ ಸರ್ಕಾರದಿಂದ ನೇಮಕಗೊಂಡಿದ್ದು, ಭಾರತೀಯ ನೃತ್ಯ ಕಲಾಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿ 30 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಸುಮಾರು 10 ವರ್ಷಗಳ ಕಾಲ ಪ್ರಜಾವಾಣಿ ದಿನಪತ್ರಿಕೆಯಲ್ಲಿ ನೃತ್ಯ ಮತ್ತು ಸಂಗೀತ ವಿಮರ್ಶೆಯ ಅಂಕಣಕಾರರಾಗಿ ಹಾಗೂ ಪ್ರಜಾನುಡಿಯಲ್ಲಿ ಸಾಂಸ್ಕೃತಿಕ ಸಂವಾದ ಎಂಬ ಅಂಕಣ ಬರೆಯುವ ಮೂಲಕ ಜನಮನ್ನಣೆ ಗಳಿಸಿದ್ದಾರೆ.

ಇವರ ಅಂಕಣಬರಹಗಳು ಪುಸ್ತಕರೂಪದಲ್ಲಿ ಹೊರಬಂದಿವೆ. ಬಿ.ಕಾಂ. ವಿದ್ಯಾರ್ಥಿಗಳಿಗಾಗಿ ಬ್ಯಾಂಕಿಂಗ್ ಹಾಗು ಆಡಿಟಿಂಗ್ ವಿಷಯಗಳಲ್ಲೂ ಇವರು ಪಠ್ಯಪುಸ್ತಕಗಳನ್ನು ಬರೆದಿದ್ದಾರೆ. ಕಲಾರಂಗಕ್ಕೆ ಇವರು ನೀಡಿದ ಕೊಡುಗೆಯನ್ನು ಗುರುತಿಸಿದ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ 2005-06 ಸಾಲಿನ ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ.

ಶ್ರೀಮತಿ ಲತಾರಾವ್‌ರನ್ನು ವಿವಾಹವಾಗಿರುವ ಇವರಿಗೆ ಕೆ.ಆರ್.ವಿಶ್ವದೀಪ್ (ಭರತನಾಟ್ಯ ಕಲಾವಿದ-ಪ್ರಸ್ತುತ ಕತಾರ್‌ನಲ್ಲಿ ಉದ್ಯೋಗಿ) ಹಾಗೂ ಕೆ.ಆರ್.ಹರ್ಷದೀಪ್ (ಇಂಜಿನಿಯರಿಂಗ್ ವಿದ್ಯಾರ್ಥಿ -ಸುಗಮಸಂಗೀತ ಕಲಾವಿದ) ಇಬ್ಬರು ಪುತ್ರರು. ರಾಮಮೂರ್ತಿರಾವ್‌ರವರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



**ಡಾ| ವೈ. ಸುದರ್ಶನ ರಾವ್**

**ಪ್ರಶ್ನೆ : ಗಾಯ್ಟರ್ (Goitre,thyroid enlargement) ಹೇಗೆ ಉಂಟಾಗುತ್ತದೆ? ಈ ಖಾಯಿಲೆಯ ಚಿಕಿತ್ಸೆ ಏನು?**

**ಉತ್ತರ :** ಕಳೆದ ಎರಡು ಸಂಚಿಕೆಗಳಲ್ಲಿ ಥೈರಾಯ್ಡ್ ಗ್ರಂಥಿಯು ಸರಿಯಾಗಿ ಕೆಲಸ ಮಾಡದಿದ್ದರೆ ಉದ್ಭವಿಸುವ ತೊಂದರೆಗಳನ್ನು ವಿವರಿಸಿದ್ದೆ. ಗಾಯ್ಟರ್ ಖಾಯಿಲೆಯೂ ಇದೇ ಗ್ರಂಥಿಗೇ ಸಂಬಂಧಿಸಿದ ಖಾಯಿಲೆಯಾದುದರಿಂದ ಹಿಂದೊಮ್ಮೆ ಈ ಖಾಯಿಲೆಯ ಬಗ್ಗೆ ವಿವರಿಸಿದ್ದರೂ ಈಗ ಪುನಃ ವಿವರಿಸುತ್ತಿದ್ದೇನೆ. ಥೈರಾಯ್ಡ್ ಗ್ರಂಥಿಯು ಕುತ್ತಿಗೆಯ ಎದುರು ಭಾಗದಲ್ಲಿ, ಸ್ವಲ್ಪ ಕೆಳಗೆ, ಶ್ವಾಸನಾಳದ ಇಕ್ಕೆಲಗಳಲ್ಲಿ 'U' ಆಕಾರದಲ್ಲಿ ಇರುವ ಒಂದು ನಿರ್ನಾಳ ಗ್ರಂಥಿ. ಇದು ಥೈರೋಕ್ಸಿನ್ ಎಂಬ ಹಾರ್ಮೋನನ್ನು ಉತ್ಪತ್ತಿ ಮಾಡುತ್ತದೆ. ಥೈರೋಕ್ಸಿನ್ ಹಾರ್ಮೋನ್ ದೇಹದ ಎಲ್ಲಾ ಅಂಗಾಂಗಗಳ ಸಹಜ ಬೆಳವಣಿಗೆಗೂ ಹಾಗೂ ಅವುಗಳ ಕಾರ್ಯನಿರ್ವಹಣೆಗೂ ಅತೀ ಅಗತ್ಯವಾದ ಹಾರ್ಮೋನ್. ಒಂದು ವೇಳೆ ಈ ಹಾರ್ಮೋನ್‌ನ ಕೊರತೆ ಬಾಲ್ಯಾವಸ್ಥೆಯಲ್ಲಿ ಉಂಟಾದರೆ, ರೋಗಿಯು ಎಷ್ಟು ವಯಸ್ಸಾದರೂ ಪ್ರಾಯಕ್ಕೆ ತಕ್ಕ ಬೆಳವಣಿಗೆಯಿಲ್ಲದೆ ಮಗುವಿನಂತೆ ಕಾಣಿಸುವನು. ಅದೇ ಈ ಹಾರ್ಮೋನಿನ ಕೊರತೆ ದೊಡ್ಡವರಲ್ಲಿ ಉಂಟಾದರೆ ದೇಹದ ಎಲ್ಲಾ ಅಂಗಾಂಗಗಳ ಕಾರ್ಯ ನಿರ್ವಹಣೆ ನಿಧಾನವಾಗುತ್ತದೆ. ಅದೇ ರೀತಿ ಈ ಹಾರ್ಮೋನಿನ ಅಧಿಕ ಸ್ರಾವದಿಂದ ದೇಹದಲ್ಲಿ ಇದಕ್ಕೆ ವಿರುದ್ಧವಾದ ಪರಿಣಾಮ ಕಾಣಿಸುತ್ತದೆ. ಈ ವಿಷಯಗಳನ್ನು ಕಳೆದ ಸಂಚಿಕೆಗಳಲ್ಲಿ ವಿಸ್ತೃತವಾಗಿ ವಿವರಿಸಿದ್ದೆ.

ಥೈರಾಯ್ಡ್ ಗ್ರಂಥಿಯು ಸಾಮಾನ್ಯವಾಗಿ ಎಂಟು ಗ್ರಾಂನಷ್ಟು ಗಾತ್ರವಿದ್ದು ಕುತ್ತಿಗೆಯ ಮಾಂಸದೊಳಗೆ ಹುದುಗಿಕೊಂಡಿರುವುದರಿಂದ ಸಾಮಾನ್ಯವಾಗಿ ಹೊರಗಿನಿಂದ ಕಾಣಿಸುವುದಿಲ್ಲ. ಒಂದು ವೇಳೆ ಈ ಗ್ರಂಥಿಯು ಈ ಗಾತ್ರಕ್ಕಿಂತ ದೊಡ್ಡದಾಗಿ ಬೆಳೆದರೆ ಕುತ್ತಿಗೆಯ ಮುಂಭಾಗದಲ್ಲಿ 'U' ಆಕಾರದಲ್ಲಿ ಕಾಣಿಸಲಾರಂಭಿಸುತ್ತದೆ. ಆಗ ಈ ಖಾಯಿಲೆಯನ್ನು ಗಾಯ್ಟರ್ ಎಂದು ಕರೆಯುವರು. ಕೆಲವು ರೋಗಿಗಳಲ್ಲಿ ಇದು ಇದೆಯೋ ಇಲ್ಲವೋ ಎಂಬಂಷ್ಟೆ ಗೋಚರಿಸಿದರೆ ಇನ್ನು ಕೆಲವರಲ್ಲಿ ಇಡೀ ಕುತ್ತಿಗೆಯ ಮುಂಭಾಗವನ್ನಾವರಿಸುವಷ್ಟು ದೊಡ್ಡದಿರುತ್ತದೆ. ಇನ್ನು ಕೆಲವರಲ್ಲಿ ಇಡೀ ಥೈರಾಯ್ಡ್ ಗ್ರಂಥಿ ದೊಡ್ಡದಾಗದೆ ಅದರ 'U' ಆಕಾರದ ಕೆಲವು ಭಾಗಗಳು ಮಾತ್ರ ದೊಡ್ಡದಾಗಬಹುದು. ಥೈರಾಯ್ಡ್ ಗ್ರಂಥಿಯು ಎಷ್ಟು ದೊಡ್ಡ ಗಾತ್ರಕ್ಕೆ ಬೆಳೆದರೂ ಅದರಲ್ಲಿ ನೋವಿಲ್ಲದಿರುವುದು, ನುಂಗಲು ಹಾಗೂ ಉಸಿರಾಡಲು ಕಷ್ಟವಾಗದಿರುವುದು ರೋಗಿಯು ಚಿಕಿತ್ಸೆಗೆ ವಿಳಂಬ ಮಾಡಲು ಕಾರಣ.

ಬೆಳೆಯುತ್ತಿರುವ ಮಕ್ಕಳಲ್ಲಿ, ಗರ್ಭಿಣಿಯರಲ್ಲಿ, ಹಾಲೂಡಿಸುವ ತಾಯಂದಿರಲ್ಲಿ ಈ ಹಾರ್ಮೋನ್ ಹೆಚ್ಚು ಪ್ರಮಾಣದಲ್ಲಿ ದೇಹಕ್ಕೆ ಬೇಕಾಗುವುದರಿಂದ ಅದನ್ನು ಉತ್ಪಾದಿಸಲು ಥೈರೋಯ್ಡ್ ಗ್ರಂಥಿಯು ಗಾತ್ರದಲ್ಲಿ ದೊಡ್ಡದಾದರೆ ಅದನ್ನು ಫಿಸಿಯಾಲಾಜಿಕಲ್ ಗಾಯ್ಟರ್ ಎನ್ನುವರು. ಇದು ಗಾಯ್ಟರ್ ಖಾಯಿಲೆಗೆ ಅತೀ ಸಾಮಾನ್ಯ ಕಾರಣ. ಥೈರೋಕ್ಸಿನ್ ಹಾರ್ಮೋನಿನ ಗುಳಿಗೆಗಳನ್ನು ಆರಂಭದಲ್ಲೇ ನೀಡಿದರೆ ಥೈರೋಯ್ಡ್ ಗ್ರಂಥಿಯು ಈ ಕಾರಣಕ್ಕಾಗಿ ಬೆಳೆಯುವುದನ್ನು ತಡೆಯಬಹುದು. ಆಹಾರದಲ್ಲಿ ಅಯೋಡಿನ್ ಲವಣದ ಕೊರತೆ ಗಾಯ್ಟರ್ ಖಾಯಿಲೆ ಬರಲು ಇನ್ನೊಂದು ಸಾಮಾನ್ಯ ಕಾರಣ. ಅಯೋಡಿನ್ ಲವಣವು ಥೈರೋಯ್ಡ್ ಹಾರ್ಮೋನಿನ ಉತ್ಪಾದನೆಗೆ ಅತೀ ಅಗತ್ಯವಾದುದರಿಂದ ಆಹಾರದಲ್ಲಿ ಇದರ ಕೊರತೆಯಿದ್ದಾಗ ಥೈರೋಯ್ಡ್ ಗ್ರಂಥಿಯಿಂದ ಹಾರ್ಮೋನ್ ಉತ್ಪಾದನೆ ಕುಂಠಿತವಾಗಿ ರಕ್ತದಲ್ಲಿ ಥೈರೋಕ್ಸಿನ್ ಹಾರ್ಮೋನಿನ ಅಂಶ ಕಡಿಮೆಯಾಗುತ್ತದೆ. ಇದನ್ನು ಮೆದುಳು ಗಮನಿಸಿ ಥೈರೋಯ್ಡ್ ಗ್ರಂಥಿಗೆ ಹೆಚ್ಚು ಹಾರ್ಮೋನ್ ಉತ್ಪಾದಿಸುವಂತೆ ಸೂಚನೆ ರವಾನಿಸುತ್ತದೆ. ಅದಕ್ಕನುಗುಣವಾಗಿ ಈ ಗ್ರಂಥಿಯು ಗಾತ್ರದಲ್ಲಿ ಬೆಳೆದು ಹೆಚ್ಚು ಹಾರ್ಮೋನನ್ನು ಉತ್ಪಾದಿಸಲು ಪ್ರಯತ್ನಿಸುತ್ತದೆ. ಇದನ್ನು ಅಯೋಡಿನ್‌ನ ಕೊರತೆಯಿಂದ ಬರುವ ಗಾಯ್ಟರ್ ಎನ್ನುವರು. ಆಹಾರದಲ್ಲಿ ಅಯೋಡಿನ್ ಇರುವ ಉಪ್ಪನ್ನೇ ಬಳಸುವ ಮೂಲಕ ಅಯೋಡಿನ್‌ನ ಕೊರತೆಯನ್ನು ಆರಂಭದಲ್ಲೇ ನೀಗಿಸಿದರೆ ಇದನ್ನು ಗುಣಪಡಿಸಬಹುದು. ಆದರೆ ಈ ಎರಡು ಕಾರಣಗಳಿಂದಾಗಿ ಬೆಳೆಯುತ್ತಿರುವ ಗಾಯ್ಟರ್‌ಗೆ ತಕ್ಕ ಔಷಧಿ ಆರಂಭದಲ್ಲೇ ಮಾಡದಿದ್ದರೆ ಮುಂದೆ ಇದು ಇನ್ನಷ್ಟು ಬೆಳೆದು ಅದರಲ್ಲಿ ಸಣ್ಣ ಸಣ್ಣ ಗಂಟುಗಳಾಗುವುದು. ಇದನ್ನು ಮಲ್ಟಿ ನೊಡ್ಯುಲಾರ್ ಗಾಯ್ಟರ್ ಎಂದು ಕರೆಯುವರು. ಈಗ ಈ ಕಾಯಿಲೆಯನ್ನು ಶಸ್ತ್ರ ಚಿಕಿತ್ಸೆಯ ವಿನಃ ಔಷಧಿಯಿಂದ ಗುಣಪಡಿಸಲು ಸಾಧ್ಯವಿಲ್ಲ. ಈ ರೀತಿ ಆರಂಭವಾದ ಗಾಯ್ಟರ್ ಅಧಿಕ ಪ್ರಮಾಣದಲ್ಲಿ ಹಾರ್ಮೋನ್ ಸ್ರವಿಸಿದರೆ ಅದನ್ನು ಟೋಕ್ಸಿಕ್‌ಗಾಯ್ಟರ್(TOXIC GOITRE) ಎಂದು ಕರೆಯುವರು.

ಥೈರಾಯ್ಡ್ ಗ್ರಂಥಿಯ ಊತ (THYROIDITIS) ದಿಂದಲೂ ಗಾಯ್ಟ್‌ರ್ ಕಾಣಿಸುವುದುಂಟು. ಕೆಲವೊಮ್ಮೆ ಏನೂ ಕಾರಣವಿಲ್ಲದೆ ಊದಿಕೊಂಡರೆ ಇನ್ನು ಕೆಲವೊಮ್ಮೆ ಮೀಣ ಜೀವಿಗಳಿಂದಾಗಿ ಆದರೆ ಇನ್ನು ಕೆಲವೊಮ್ಮೆ ದೇಹದ ರೋಗನಿರೋಧಕ ಶಕ್ತಿಯು ತಮ್ಮದೇ ದೇಹದ ಭಾಗವಾದ ಈ ಗ್ರಂಥಿಯನ್ನು ಪರಕೀಯವೆಂದು ತಪ್ಪು ಗುರುತಿಸಿ ಅದರ ಮೇಲೆ ಆಕ್ರಮಣ ಮಾಡಿ ಆಗುವುದುಂಟು ಇದನ್ನು ಅಟೋಇಮ್ಯುನ್‌ಥೈರಾಯ್ಡೈಟಿಸ್ ಎನ್ನುತ್ತಾರೆ. ಈ ತೊಂದರೆ ಸ್ವಲ್ಪ ಸಮಯವಿದ್ದು ನಂತರ ತನ್ನಿಂತಾನಾಗಿಯೋ, ಚಿಕಿತ್ಸೆಯಿಂದಲೋ ಗುಣವಾಗುತ್ತದೆ. ಈ ಖಾಯಿಲೆಗೆ ಶಸ್ತ್ರಚಿಕಿತ್ಸೆಯ ಅಗತ್ಯ ಬೀಳುವುದು ಕಡಿಮೆ. ಆದರೆ ಇದೇ ಜಾತಿಗೆ ಸೇರಿದ ಗ್ರೇವ್ಸ್ ಡೀಸೀಸ್ ಎಂಬ ಗಾಯ್ಟರ್ ಹೆಚ್ಚು ತಾಪತ್ರಯ ಕೊಡುತ್ತದೆ. ಹಾಗೂ ಅದಕ್ಕೆ ಶಸ್ತ್ರಚಿಕಿತ್ಸೆಯ ಅಗತ್ಯವಿದೆ.

ಇನ್ನು ಕೆಲವರಲ್ಲಿ ಥೈರೋಯ್ಡ್ ಗ್ರಂಥಿಯು ದುರ್ಮಾಂಸ ಮತ್ತು ಕ್ಯಾನ್ಸರ್ ಖಾಯಿಲೆಯಿಂದಲೂ ದೊಡ್ಡದಾಗಿ ಕಾಣಿಸಬಹುದು. ವಿಶೇಷವೆಂದರೆ ಥೈರೋಯ್ಡ್‌ನ ಕ್ಯಾನ್ಸರ್ ವಯಸ್ಸಾದವರಲ್ಲೆಷ್ಟು ಸಾಮಾನ್ಯವೋ ಅಷ್ಟೇ ಮಕ್ಕಳಲ್ಲೂ ಸಾಮಾನ್ಯ. ಹಾಗಾಗಿ ಮಕ್ಕಳಲ್ಲಿ ಗಾಯ್ಟರ್ ಇದ್ದರೆ ಪಿಸಿಯೊಲಾಜಿಕಲ್ ಗಾಯ್ಟರ್ ಎಂದು ಚಿಕಿತ್ಸೆ ನೀಡುವ ಮುನ್ನ ಈ ಖಾಯಿಲೆ ಅಲ್ಲವೆಂದು ಖಚಿತಪಡಿಸಿಕೊಳ್ಳುವುದು ಅಗತ್ಯ. ಕೆಲವೇ ದಿನಗಳ ಅಥವ ತಿಂಗಳುಗಳ ಅಂತರದಲ್ಲಿ ಥೈರೋಯ್ಡ್ ವೇಗವಾಗಿ ಬೆಳೆದು ದೊಡ್ಡದಾಗಿ ಕಾಣಿಸುವುದು, 'U' ಆಕಾರದಲ್ಲಿರುವ ಥೈರೋಯ್ಡ್‌ನ ಒಂದು ಭಾಗ ಮಾತ್ರ ದೊಡ್ಡದಾಗಿರುವುದು, ಒತ್ತಿ ನೋಡುವಾಗ ಕಲ್ಲಿನಂತೆ ಗಟ್ಟಿಯಾಗಿರುವುದು, ಸ್ವರದಲ್ಲಿ ಬದಲಾವಣೆ, ನುಂಗಲು ಕಷ್ಟವಾಗುವುದು ಇವುಗಳೆಲ್ಲ ಥೈರೋಯ್ಡ್ ಗ್ರಂಥಿಯ ಕ್ಯಾನ್ಸರ್‌ನ ಸೂಚನೆಗಳು. ಇದಕ್ಕೆ ಆದಷ್ಟು ಬೇಗನೆ ಶಸ್ತ್ರ ಚಿಕಿತ್ಸೆಯ ಮುಖಾಂತರ ಥೈರೋಯ್ಡ್ ಗ್ರಂಥಿಯನ್ನು ತೆಗೆಯುವುದೇ ಸರಿಯಾದ ಚಿಕಿತ್ಸೆ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು.**
**ಸಂಚಾರಿ ದೂರವಾಣಿ ನಂ. : 9845136322**

## ರಜತ್ ಕುಮಾರ್ ಕೆ.ಆರ್.ಕೆ.



ರಜತ್ ಕುಮಾರ್ ಕೆ.ಆರ್.ಕೆ. 2012–13ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 608 (97.23%)ಅಂಕ ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಇವನು ಮಂಗಳೂರಿನ ಕೆನರಾ ಪೌಢಶಾಲೆ, ಉರ್ವ ಇಲ್ಲಿನ ವಿದ್ಯಾರ್ಥಿ. ಬಹುಮುಖ ಪ್ರತಿಭಾವಂತನಾದ ರಜತ್‌ಕುಮಾರ್‌ನಿಗೆ ಎನ್.ಸಿ.ಸಿ. ಕೆಡೆಟ್ ವೆಲ್‌ಫೇರ್ ಸೊಸೈಟಿ ಯಿಂದ ಸ್ಕಾಲರ್‌ಶಿಪ್ ಲಭಿಸಿರುತ್ತದೆ. ಅಲ್ಲದೇ ಶ್ರೀ ಸುರಸರಸ್ವತಿ ಸಭಾ, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ, ಶೃಂಗೇರಿ ಸಂಸ್ಕೃತ ಇವರು ನಡೆಸುವ ಸಂಸ್ಕೃತ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾನೆ. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ಡ್ರಾಯಿಂಗ್ ಪರೀಕ್ಷೆ, ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಲ್ಲಿ ಪ್ರಥಮ ದರ್ಜೆಯನ್ನು ಪಡೆದಿರುತ್ತಾನೆ. ಅನೇಕ ರಸಪ್ರಶ್ನೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ಗಳಿಸಿರುತ್ತಾನೆ.

ಇವನು ಮೃದಂಗ ಚಕ್ರವರ್ತಿ ಕರ್ನಾಟಕ ಕಲಾಶ್ರೀ ಪ್ರಶಸ್ತಿ ವಿಜೇತ ಮೃದಂಗ ವಿದ್ವಾನ್ ಕೆ. ಹರಿಶ್ಚಂದ್ರನ್ ಮತ್ತು ಕೆ.ಎಚ್.ಸರಸ್ವತಿ ಅವರ ಮೊಮ್ಮಗ ಹಾಗೂ ಮಂಗಳೂರು ಆಕಾಶವಾಣಿಯ ನಿಲಯದ ಕಲಾವಿದರಾಗಿ ಸೇವೆ ಸಲ್ಲಿಸುತ್ತಿರುವ ಮೃದಂಗ ವಿದ್ವಾನ್ ಕೆ.ಎಚ್.ರವಿಕುಮಾರ್ ಮತ್ತು ಜ್ಯೋತಿ ರವಿಕುಮಾರ್ ದಂಪತಿಯ ಪುತ್ರ. ಈತನ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಕೃತಿಕಾ.ಡಿ



ಕೃತಿಕಾ.ಡಿ 2012–13ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಬೆಂಗಳೂರು ಸರಸ್ವತೀ ವಿದ್ಯಾ ಮಂದಿರದ ವಿದ್ಯಾರ್ಥಿನಿ ಕೃತಿಕಾ.ಡಿ. 606 (ಶೇ.97.1%) ಅಂಕ ಪಡೆದಿರುತ್ತಾಳೆ. ಈಕೆ ಬೆಂಗಳೂರಿನಲ್ಲಿರುವ ಬಾರಕೂರು ಮಸ್ಕಿಬೈಲ್ ಶ್ರೀ ದಿನೇಶ್ ರಾವ್ ಮತ್ತು ಶ್ರೀಮತಿ ಸುಜಾತ ಯು. ದಂಪತಿಗಳ ಪುತ್ರಿ ಹಾಗೂ ಬಾರಕೂರು ಮಸ್ಕಿಬೈಲಿನಲ್ಲಿರುವ ಶ್ರೀಮತಿ ಸುನಂದಾ ಸೀತಾರಾಮ ರಾವ್ ಅವರ ಪೌತ್ರಿ. ಈಕೆಯ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ವಸುಪ್ರದಾ.ಯು



ಬೆಂಗಳೂರಿನ ಜ್ಞಾನೋದಯ ಪಿ.ಯು.ಕಾಲೇಜಿನ ವಿದ್ಯಾರ್ಥಿನಿ ವಸುಪ್ರದಾ ಯು. 2012–13ನೇ ಸಾಲಿನ ದ್ವಿತೀಯ ಪಿ.ಯು. (ವಿಜ್ಞಾನ ವಿಭಾಗ) ಪರೀಕ್ಷೆಯಲ್ಲಿ ಶೇ. 92.3 (554) ಅಂಕ ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಸುರೇಶ ಯು.ಜಿ. ಮತ್ತು ಶ್ರೀಮತಿ ವತ್ಸಲಾ ದಂಪತಿಗಳ ಪುತ್ರಿ ಹಾಗೂ ಉದ್ಯಾವರ ಗೋಪಾಲ ರಾವ್ ಇವರ ಪೌತ್ರಿ. ಈಕೆಯ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಹರಿಪ್ರಸಾದ್.ಎಸ್.ರಾವ್



ಪ್ರಸ್ತುತ ಕಾಡುಹೊಳೆಯಲ್ಲಿ ವಾಸಿಸುತ್ತಿರುವ ಶ್ರೀ ಪೆರ್ಡೂರು ಸುಬ್ರಮಣ್ಯ ವಿ.ರಾವ್ ಮತ್ತು ಶ್ರೀಮತಿ ನಾಗವಲ್ಲಿ ಇವರ ಪುತ್ರನಾದ ಹರಿಪ್ರಸಾದ್ ಎಸ್.ರಾವ್ 2012–13ನೇ ಸಾಲಿನ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ 560 (ಶೇ.93%) ಅಂಕ ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾನೆ. ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜಿನ ವಿದ್ಯಾರ್ಥಿಯಾದ ಇವನು ಪಿಸಿಎಮ್ ನಲ್ಲಿ 95% ಅಂಕ ಗಳಿಸಿದ್ದಾನೆ. ಈತನ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಲಾವಣ್ಯ.ಎಸ್.ರಾವ್ ನಂದಳಿಕೆ



2012–13ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ನಿಟ್ಟೆ ವಿದ್ಯಾಸಂಸ್ಥೆಯ ಕಾಮರ್ಸ್ ವಿದ್ಯಾರ್ಥಿನಿ ಲಾವಣ್ಯ ರಾವ್ 92.8% (563) ಅಂಕಗಳನ್ನು ಗಳಿಸಿ ತೇರ್ಗಡೆಯಾಗಿರುತ್ತಾಳೆ.

ನಂದಳಿಕೆಯ ಬಿ.ಸುರೇಶ್‌ರಾವ್ ದಂಪತಿಗಳ ಪುತ್ರಿಯಾಗಿರುವ ಈಕೆಯ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

### ಮೂರು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದ ಸ್ಥಾನಿಕ ಬ್ರಾಹ್ಮಣ ಸಭಾ (ರಿ), ಪಡುಬಿದ್ರಿ

(1ನೇ ಪುಟದಿಂದ)

ದೇವಾನಂದ ಭಟ್ ಇವರನ್ನು ಸಂಘದ ಪರವಾಗಿ ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳಾದ ಡಾ| ಬಿ.ಎಚ್.ರಾಘವ ರಾವ್ ಸಂಘವು ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು ಹೆಜಮಾಡಿಯ ವಸಂತ ಕುಮಾರ್ ಇವರು ಸಂಘದ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀ ದೇವಾನಂದ ಭಟ್ ಸಂಘವು ಇಷ್ಟು ಕಡಿಮೆ ಅವಧಿಯಲ್ಲಿ ಸ್ಥಳೀಯವಾಗಿ ನಮ್ಮವರ ಆಡಳಿತಕ್ಕೆ ಒಳಪಟ್ಟ ಎರಡು ದೇವಸ್ಥಾನಗಳ ಸಂಪೂರ್ಣ ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶ ಇತ್ಯಾದಿಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟಿರುವುದು, ನಮ್ಮ ಸಮಾಜದ ಬಡಕುಟುಂಬದ ವಧುಗಳಿಗೆ ವಿವಾಹಗಳಿಗೆ ಸಹಾಯ ಮಾಡುವುದು ಸಭೆ–ಸಮಾರಂಭಗಳಿಗೆ ಬರೇ ದೂರವಾಣಿಯ ಮೂಲಕ ಆಮಂತ್ರಣ ಕಳುಹಿಸುವ ಈಗಿನ ಕಾಲದಲ್ಲೂ ಸಂಘದ ಪ್ರತಿ ಸಮಾರಂಭ ಗಳಲ್ಲೂ ಮನೆ ಮನೆಗೆ ಸ್ವತಃ ಬೇಟಿ ನೀಡಿ ಆಮಂತ್ರಣ ನೀಡುವುದು, ಮೊದಲಾದ ಉತ್ತಮ ಕಾರ್ಯ ವೈಖರಿಯ ಮೂಲಕ ಇತರರಿಗೆ ಆದರ್ಶಣೀಯವಾಗಿ ಇನ್ನೂ ಎತ್ತರಕ್ಕೆ ಬೆಳೆಯುವುದರಲ್ಲಿ ಸಂಶಯವಿಲ್ಲ. ಎಂಬುದಾಗಿ ಪ್ರಶಂಶಿಸಿದರು. ಇದರ ಜೊತೆಗೆ ಪಡುಬಿದ್ರಿಯ ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ವಠಾರದಲ್ಲಿ ನಿರ್ಮಿಸ ಬೇಕೆಂದಿರುವ ಸುಂದರ ಸಭಾಭವನವು ಆದಷ್ಟು ಶೀಘ್ರದಲ್ಲಿ ನಿರ್ಮಾಣವಾಗುವಲ್ಲಿ ಭಗವಂತನ ಕೃಪೆಯಿರಲಿ ಎಂದು ಹಾರೈಸಿ ದರು. ಶ್ರೀಯುತ ವೈ.ಎಸ್.ಸುದರ್ಶನ್ ರಾವ್ ಇವರು ಕಾರ್ಯಕ್ರಮವನ್ನು ನಿರೂಪಿಸಿದರು. ಭೋಜನ ಕೂಟದೊಂದಿಗೆ ಸಂಘದ ಮಹಾಸಭೆಯು ಸಂಪನ್ನ ಗೊಂಡಿತು

ಅಪರಾಹ್ನ ಸಂಘದ ನೂತನ ಆಡಳಿತ ಮಂಡಳಿಯು ರಚನೆಯಾಯಿತು.

ಪಿ.ಬಿ.ವಾಸುದೇವ ರಾವ್ (ಗೌರವಾಧ್ಯಕ್ಷರು), ಎಮ್.ಕೆ.ಮೋಹನ್ ರಾವ್ (ಅಧ್ಯಕ್ಷರು), ವೈ.ವಿ.ಸುಬ್ಬರಾವ್ (ಉಪಾಧ್ಯಕ್ಷರು), ಎ.ರಾಮರಾವ್ (ಉಪಾಧ್ಯಕ್ಷರು), ಸುಧಾಕರ ಬೆಳ್ಳೆ (ಕಾರ್ಯದರ್ಶಿ), ವೈ.ಮಾಧವ ರಾವ್ (ಜೊತೆ ಕಾರ್ಯದರ್ಶಿ), ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ (ಜೊತೆ ಕಾರ್ಯದರ್ಶಿ), ಅರವಿಂದ ರಾವ್ (ಕೋಶಾಧಿಕಾರಿ), ಶ್ರೀಕಾಂತ್ ರಾವ್ (ಸಹಕೋಶಾಧಿಕಾರಿ), ಸುದರ್ಶನ ವೈ.ಯಸ್. (ಪತ್ರಿಕಾ ವಕ್ತಾರ), ಎಸ್. ಜನಾರ್ದನ ರಾವ್ (ಯುವ ವೇದಿಕೆಯ ಸಂಚಾಲಕ), ಶ್ರೀನಿವಾಸ್ ಶರ್ಮ (ಯುವ ವೇದಿಕೆಯ ಸಂಚಾಲಕ) ಹಾಗೂ ನಿರ್ದೇಶಕರುಗಳಾಗಿ ಎಂ.ಕೆ.ದಿವಾಕರ ರಾವ್, ಕೃಷ್ಣರಾಜ ರಾವ್, ಉಲ್ಲಾಸ್ ರಾವ್, ಪಿ.ಡಿ.ಶೇಖರ್ ರಾವ್, ಐ.ಲಕ್ಷ್ಮೀಕಾಂತ್ ರಾವ್, ಚಂದ್ರಶೇಖರ್ ರಾವ್, ಸುದರ್ಶನ ರಾವ್, ನಯನಾಭಿರಾಮ ಸ್ವಾಮಿ, ವಿದ್ಯಾರಣ್ಯ ರಾವ್, ಗೋವಿಂದ ರಾವ್, ಶ್ರೀಮತಿ ಸೀತಾದೇವಿ ಬಾಸ್ಕರ್ ರಾವ್, ಶ್ರೀಮತಿ ನಿರುಪಮಾ ಎಸ್.ರಾವ್, ಶ್ರೀಮತಿ ರಮ್ಯ ಎ.ರಾವ್, ಶ್ರೀಮತಿ ಬಿ.ಎಸ್.ಲಲಿತಾ ರಾವ್ ಇವರುಗಳು ಅಯ್ಕೆಯಾಗಿರುತ್ತಾರೆ.

## ಸೀಮಂತೋನ್ನಯನ

ಹಳೆಯಂಗಡಿಯಲ್ಲಿ ವಾಸ್ತವ್ಯದಲ್ಲಿರುವ ಬೆಳ್ಳೆ ಮುಕುಂದ ರಾವ್ (ಬಿ. ಭವಾನಿಶಂಕರ ರಾವ್ ರವರ ಪುತ್ರ) ಇವರ ಪತ್ನಿ ಶ್ರೀಮತಿ ರೂಪಾಶ್ರೀ ಇವರ ಸೀಮಂತೋನ್ನಯನವು ತಾ.30-06-2013 ರಂದು ಉಡುಪಿ ಕುಂಜಿಬೆಟ್ಟಿನ ಜ್ಞಾನಮಂದಿರದಲ್ಲಿ ಜರಗಿತು.

### ಕರ್ಕಾಟಕ ಮಾಸದ ವಿಶೇಷ ದಿನಗಳು

| | |
|---|---|
| 16-07-2013 | ಕರ್ಕಾಟಕ ಸಂಕ್ರಮಣ |
| 19-07-2013 | ಏಕಾದಶಿ, ಪುಷ್ಯಾ ನಕ್ಷತ್ರಾರಂಭ |
| 20-07-2013 | ಪ್ರದೋಷಃ |
| 22-07-2013 | ಪೂರ್ಣಿಮಾ |
| 25-07-2013 | ಸಂಕಷ್ಟ ಚತುರ್ಥಿ (ಚಂದ್ರೋದಯ ರಾತ್ರಿ 9.05ಕ್ಕೆ) |
| 02-08-2013 | ಏಕಾದಶೀ |
| 03-08-2013 | ಆಶ್ಲೇಷಾ ನಕ್ಷತ್ರಾರಂಭ |
| 04-08-2013 | ಪ್ರದೋಷಃ |
| 06-08-2013 | ಅಮವಾಸ್ಯಾ |
| 11-08-2013 | ನಾಗರ ಪಂಚಮಿ |
| 16-08-2013 | ವರಮಹಾಲಕ್ಷ್ಮಿ ವ್ರತ |
| 17-08-2013 | ಸಿಂಹ ಸಂಕ್ರಮಣ, ಸರ್ವೇಕಾದಶೀ, ಮಘಾ ನಕ್ಷತ್ರಾರಂಭ |

## ವಿಳಾಸ ಬದಲಾವಣೆ

**A RAGHVENDRA RAO**
J 101 , CONCORDE MANHATTANS,
OPP WIPRO GATE -16,
ELECTRONIC CITY , PHASE -1
BANGALORE-560 100.

★★★★

**DIVAKAR RAO**
201 -A ,
PANCHASHEEL SHOPPING CENTER
OFF AMBADI ROAD
KRISHNA TOWNSHIP
VASAI (WEST) DISTñTHANE
PIN-40120

★★★★

**K. SRIPATHI RAO**
NO.2-66(5), SRI NIVASA,
3RD CROSS, SASYODHANA
SHAKTHI NAGAR,
KUVETTU VILLAGE,
GURUVAYANAKERE,
P.O.BELTHANGADI, D.K.-574217.

★★★★

**ರಾಘವೇಂದ್ರ ರಾವ್ ಬೆಳ್ಳೆ**
ಸ್ನೇಹರಾಗ
ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಬಳಿ
ಬೆಳ್ಮಣ್–ಕಾರ್ಕಳ ತಾಲೂಕು
ಉಡುಪಿ ಜಿಲ್ಲೆ–576111.

## ನಿಧನ

### ಗಣೇಶ್ ರಾವ್ ಎಮ್.

ಸ್ಟೇಟ್‌ಬ್ಯಾಂಕಿನ ಉದ್ಯೋಗಿ ಕೊಡವೂರು ಶ್ರೀ ಗಣೇಶ್‌ರಾವ್ ಎಮ್. (58) ಇವರು ತಾ.16-06-2013ರಂದು ನಿಧನರಾದರು. ಮೃತರು ಪತ್ನಿ, ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

★★★ ★★★

### ಸುಭಾಷ್‌ಚಂದ್ರ ರಾವ್

ಉಡುಪಿ ಪುತ್ರನ್ ಗ್ಯಾಸ್ ಏಜೆನ್ಸಿಯ ಉದ್ಯೋಗಿ ಉದ್ಯಾವರದಲ್ಲಿ ವಾಸ್ತವ್ಯದಲ್ಲಿರುವ ಸುಭಾಷ್‌ಚಂದ್ರ ರಾವ್ (54) ಇವರು ತಾ.04-07-2013ರಂದು ಹೃದಯಾಘಾತದಿಂದ ನಿಧನರಾದರು. ಇವರು ಪತ್ನಿ, ಪುತ್ರಿ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

★★★ ★★★

### ಪಿ. ಶಿವರಾವ್

ಕಾರ್ಕಳದಲ್ಲಿ ವಾಸ್ತವ್ಯದಲ್ಲಿರುವ ನಿವೃತ್ತ ಮುಖ್ಯೋಪಾಧ್ಯಾಯ ಪಿ.ಶಿವರಾವ್ ಇವರು (72 ವರ್ಷ) ಬೆಂಗಳೂರಿನ ತಮ್ಮ ಮಗಳು ಡಾ| ಶೈಲಜಾ ಅವರ ಮನೆಯಲ್ಲಿ ತಾ.28-06-2013ರಂದು ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವ ರನ್ನು ಅಗಲಿರುತ್ತಾರೆ.

# ಶ್ರೀ ಶಾರದಾ

## REVISED ADVERTISEMENT RATES

(Effective from August 2013)

| | |
|---|---|
| FRONT PAGE | **Rs.25/- per Column Cms** |
| BACK PAGE | **Rs.20/- per Column Cms** |
| INSIDE PAGE | **Rs.15/- per Column Cms** |

| | |
|---|---|
| FRONT PAGE EAR PANNEL (9 cms x 4 cms) | **Rs.300 / month** **Rs.3000 / Year** |
| FRONT PAGE BOTTOM SPREAD (6 cms x 4 Columns) | **Rs.600 / month** **Rs.6000 / Year** |
| BACK PAGE BOTTOM SPREAD (5 cms x 4 Columns) | **Rs.500 / month** **Rs.5000 / Year** |

Note : Front Page Minimum Size 10 cms x 2 Columns
Back Page Minimum Size 5 cms x 2 Columns
Inside Page Minimum Size 5 cms x 1 Column

*(Width of 1 Column is 5.5 cms, Width of 2 Column is 11.5 cms, Width of 3 Column is 17.5 cms, Width of 4 Column is 23 cms)*

## ಪುಣ್ಯಸ್ಮರಣೆ



ಜನನ : 08-08-1938 ಮರಣ : 17-07-2008

### ಡಾ। ಎಲ್ಲೂರು ಚಂದ್ರಶೇಖರ ರಾವ್

ಸರಿದುವು ಐದು ವರುಷಗಳು ನಿಮ್ಮ ಬದುಕಿನಾ ನೆನಪಿನಲಿ
ಅರ್ಪಿಸುವೆವು ನುಡಿನಮನಗಳ ಶ್ರದ್ಧಾಭಕ್ತಿಯಲಿ

ಶ್ರೀಮತಿ ಇಂದಿರಾ (ಪತ್ನಿ)
ಡಾ। ವೈ. ಸುದರ್ಶನ ರಾವ್ ಮತ್ತು ಶ್ರೀಮತಿ ವಿದ್ಯಾ ರಾವ್
ಶ್ರೀ ವೈ. ಚಿತ್ತರಂಜನ ರಾವ್ ಮತ್ತು ಶ್ರೀಮತಿ ಭಾನುಪ್ರಿಯ
ಶ್ರೀಮತಿ ನಿವೇದಿತಾ ರಾವ್ ಮತ್ತು ಶ್ರೀ ಕೆ. ಎಸ್. ಮುರಲೀಧರ ರಾವ್
ಮತ್ತು ಮೊಮ್ಮಕ್ಕಳು



ಎಮ್. ದೇವಾನಂದ್ ಭಟ್ Cell : 9845644556, 9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Celebrations
Conference & Party Hall (Air Conditioned)
HALL AVAILABLE FOR BIRTHDAYS, CONFERENCES, CORPORATE MEETINGS, CLUB MEETINGS & OTHER FUNCTIONS.

FOR BOOKINGS CONTACT
ANUGRAHA BUILDING, UDUPI - MANIPAL ROAD, LAXMINDRA NAGAR, KUNJIBETTU POST, UDUPI - 576 102. Mob.: 9632099439
Prop. : ADARSH RAO

RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
the right Place for the right customers
QUALITY FIRST AND ALWAYS

Krishna Rao
Ph : 2520652
Mob. : 9902029048
KISHAN
Studio & Video
Indoor Photography & Port Folio Photography, Video & Mixing, Lamination
MAIN ROAD, MAJOOR & BANTAKAL.

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ತಂತ್ರಾಡಿ ವಿಶ್ವನಾಥ ಶಾನುಭೋಗ್ 94487 24161, 97417 85551
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
Harikrishna Digitals
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102

ಪ್ರೊ : ಸುಧಾಕರ್ ರಾವ್ ಬೆಳ್ಳೆ
ಶ್ರೀಮಾತಾ ಇಲೆಕ್ಟ್ರಾನಿಕ್ಸ್
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093


Owned & Published by : U. Aravindakumar - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org